

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 33 | ಜುಲೈ – ಸೆಪ್ಟೆಂಬರ್ 2020 | ರೂ. 10/– | ಸಂಚಿಕೆ 02




## ವಿಧ್ಯುಕ್ತವಾಗಿ ನಡೆದ ಗಣೇಶೋತ್ಸವ



## ಆನ್‌ಲೈನ್ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ವಿಜೇತರು

### ಹಾಡೋಣ ಬಾರಾ




ಸಾನ್ವಿ



ನಿಹಿರಾ



ವಿಜಯಶ್ರೀ



ಆದಿತ್ಯಾ




ವರ್ಣಿಕಾ

### ಏಕಪಾತ್ರಾಭಿನಯ



ದೀಕ್ಷಾ ಭಟ್

### ಸಂಸ್ಕೃತ ಶ್ಲೋಕ



ಹಂಸಕೃಷ್ಣ




ಮಹಿಮಾ

### ಸಂಗೀತೋತ್ಸವ



ವಿದ್ಯಾ ಸುಭಾಷ್



ತೇಜಸ್ ಅಡಿಗ

**ಗಮನಿಸಿ : ವಾರ್ಷಿಕ ಸರ್ವ ಸದಸ್ಯರ ಮಹಾಸಭೆ – 22.11.2020**

*With best compliments from :*

# TEDMAG
# ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

- **MILK PROCESSING**
- **FOOD PROCESSING**
- **PLANT TISSUE CULTURE**
- **ALLIED INDUSTRIES**

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 33 ಸಂಚಿಕೆ 02

ಅಧ್ಯಕ್ಷರು :
ವಿಜಯಲಕ್ಷ್ಮಿ ಭಟ್ ಎಸ್.

ಕಾರ್ಯದರ್ಶಿ :
ಎಂ. ಕೆ. ಗುರುಮೂರ್ತಿ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಡಿ. ಶರತ್ ಕುಮಾರ ಭಟ್
ಡಾ. ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ
ಎಂ. ಕೃಷ್ಣ ಪ್ರಸಾದ್

ಸಲಹೆಗಾರರು :
ಶ್ರೀ ಎಸ್. ಹರಿದಾಸ ಉಪಾಧ್ಯ

ಜಾಹೀರಾತು ಸಮನ್ವಯ :
ಶ್ರೀ ವೈ. ರಾಧಾಕೃಷ್ಣ
ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ
ಮಟ್ಟಿ ರಾಮಚಂದ್ರರಾವ್



ವಿಳಾಸ :
ಆನಂದ ಬಳಗ
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org




# ಅಧ್ಯಕ್ಷರ ಮಾತು......



ನಲ್ಮೆಯ ಸದಸ್ಯ ಬಂಧುಗಳೇ,

ನಮ್ಮ ಆನಂದ ಬಳಗವು ಸಾಮಾನ್ಯವಾಗಿ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಪ್ರತಿ ವರ್ಷವೂ ಹೆಚ್ಚಿನ ಚಟುವಟಿಕೆಯಿಂದ ಕ್ರಿಯಾಶೀಲವಾಗಿರುವುದು ತಮಗೆ ತಿಳಿದೇ ಇದೆ. ಆದರೆ ಈ ವರ್ಷ ಜಗತ್ತಿನಾದ್ಯಂತ ವ್ಯಾಪಿಸಿರುವ ಕೊರೋನಾ ಸಾಂಕ್ರಾಮಿಕ ಪಿಡುಗಿನಿಂದಾಗಿ ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳನ್ನು ಸಂಯೋಜಿಸಲು ಸಾಧ್ಯವಾಗದ ಅನಿವಾರ್ಯ ಪರಿಸ್ಥಿತಿ ಬಂದಿದೆ. 2019ರಲ್ಲಿ ಕಾಣಿಸಿಕೊಂಡ ಕೋವಿಡ್–19, 2020ರ ಕೊನೆ ಭಾಗದಲ್ಲಿ ಶಮನವಾಗುತ್ತದೆ ಎಂದು ನಿರೀಕ್ಷಿಸಿದ್ದರೂ, ಅಂತಹ ಲಕ್ಷಣಗಳೇನೂ ಕಾಣುತ್ತಿಲ್ಲ. ಆದರೆ ನಮ್ಮ ಜವಾಬ್ದಾರಿಯನ್ನು ಬಹಳ ನಿಗಾವಹಿಸಿ ನಿರ್ವಹಿಸುವುದು ನಮ್ಮೆಲ್ಲರ ಕರ್ತವ್ಯ. ಹಿಂದೆಂದೂ ಕಾಣದ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ನಮ್ಮ ಸಾಂಸ್ಕೃತಿಕ ಮತ್ತು ಯುವ ವಿಭಾಗದವರು ಕೈಕಟ್ಟಿ ಕುಳಿತುಕೊಳ್ಳದೆ, ಮಕ್ಕಳಿಗಾಗಿ ಹಾಡೋಣುಬಾರಾ.. ಹಾಡೋಣು ಬಾ ಎಂಬ ಶೀರ್ಷಿಕೆಯಲ್ಲಿ ಗಾಯನ ಸ್ಪರ್ಧೆಗಳನ್ನು ಹಾಗೂ ನಟನ–ಪಠಣ ಎಂಬ ಶಿರೋನಾಮೆಯಲ್ಲಿ ಏಕಪಾತ್ರಾಭಿನಯ ಮತ್ತು ಸಂಸ್ಕೃತ ಶ್ಲೋಕ ಸ್ಪರ್ಧೆಗಳನ್ನು ಜುಲೈ–ಆಗಸ್ಟ್ ತಿಂಗಳಲ್ಲಿ ಆನ್–ಲೈನ್ ಮೂಲಕ ಸಂಯೋಜಿಸಿರುವುದು ಸ್ತುತ್ಯಾರ್ಹ. ಸಂಗೀತ ಸ್ಪರ್ಧೆಯಲ್ಲಿ 98 ಸ್ಪರ್ಧಿಗಳು 148 ಹಾಡುಗಳನ್ನು ಹಾಡಿರುವುದು ಒಂದು ರೀತಿಯ ದಾಖಲೆ ಎನ್ನಬಹುದು. ನಟನ–ಪಠಣ ಸ್ಪರ್ಧೆಗಳಲ್ಲಿ 44 ಸ್ಪರ್ಧಿಗಳು ಪಾಲ್ಗೊಂಡಿದ್ದು, ನಮ್ಮಲ್ಲಿರುವ ಸುಪ್ತ ಬಾಲ ಪ್ರತಿಭೆಗಳ ಅನಾವರಣಕ್ಕೆ ಮುಕ್ತ ಅವಕಾಶ ಕಲ್ಪಿಸಿಕೊಟ್ಟಿದೆ.

ಇಂತಹ ಹೊಸ ಪರಿಕಲ್ಪನೆಯ ಯಶಸ್ಸಿನಿಂದ ಸ್ಫೂರ್ತಿ ಪಡೆದ ಯುವವಿಭಾಗ ಕೂಡಾ 19 ವರ್ಷ ಮೇಲ್ಪಟ್ಟ ಸದಸ್ಯರಿಗೆ ಆನ್‌ಲೈನ್ ಮೂಲಕ ಸಂಗೀತ ಸ್ಪರ್ಧೆಯನ್ನು ಸೆಪ್ಟೆಂಬರ್ ತಿಂಗಳಲ್ಲಿ ಸಂಯೋಜಿಸಿದ್ದು, 113 ಹಾಡುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಈ ಸಂಗೀತೋತ್ಸವದ ರಸದೂಟವನ್ನು ಬಳಗದ ಸುಮಾರು 900 ಕುಟುಂಬದವರು ಆನ್‌ಲೈನ್ ಮೂಲಕ ಆಸ್ವಾದಿಸಿರುವುದು, ಈ ಕಾರ್ಯಕ್ರಮದ ಯಶಸ್ಸು ಮತ್ತು ಜನಪ್ರಿಯತೆಗೆ ಸಾಕ್ಷಿ. ಈ ಆನ್‌ಲೈನ್ ಸ್ಪರ್ಧೆಗಳನ್ನು ಶಿಸ್ತುಬದ್ಧವಾಗಿ ರೂಪಿಸಿ, ಕಾರ್ಯಗತಗೊಳಿಸಿದ ಸಾಂಸ್ಕೃತಿಕ ಹಾಗೂ ಯುವ ವಿಭಾಗದ ಸಂಚಾಲಕರಿಗೆ ಮತ್ತು ಅವರ ಕ್ರಿಯಾಶೀಲ ಕಾರ್ಯತಂಡಕ್ಕೆ ಶ್ಲಾಘನೆಗಳು.

ಶ್ರೀ ಗಣೇಶೋತ್ಸವವನ್ನು ಯುವ ವಿಭಾಗವು ಸರಳವಾಗಿ ಪುತ್ತಿಗೆ ಮಠದಲ್ಲಿ ಆಚರಿಸಿದೆ. ಸರಕಾರದ ಕೋವಿಡ್–19 ನಿಯಮ ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಈ ಕಾರ್ಯಕ್ರಮವನ್ನು ನಡೆಸುವುದು ಅನಿವಾರ್ಯವಾದುದರಿಂದ ಬಳಗದ ಎಲ್ಲಾ ಸದಸ್ಯರಿಗೆ ಗಣೇಶೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಲಿಲ್ಲ. ನಮ್ಮ ಸದಸ್ಯರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂಬ ನಂಬಿಕೆ ನಮಗಿದೆ. ಆದಷ್ಟು ಶೀಘ್ರ ಕೊರೋನಾ ಮಹಾಮಾರಿ ತೊಲಗಿ, ಮತ್ತೆ ಸಹಜ ಸ್ಥಿತಿ ಮರಳುವಂತಾಗಿ, ಬಳಗದ ಎಲ್ಲಾ ಕಾರ್ಯಕ್ರಮಗಳು ಈ ಹಿಂದಿನಂತೆ ಸಂಭ್ರಮದಿಂದ ನಡೆಯಲು ಸಾಧ್ಯವಾಗಲಿ ಎಂದು ನಮ್ಮ ನಿರೀಕ್ಷೆ. ಬಳಗದ ವಾರ್ಷಿಕ ಮಹಾಸಭೆ ದಿ.22.11.2020 ರಂದು ನಡೆಯಲಿದೆ. ಕೋವಿಡ್–19ರ ನಿರ್ಭಂಧನೆಗಳಿಗೆ ಅನುಗುಣವಾಗಿ ಈ ಸಭೆ ನಡೆಯಲಿದ್ದು, ಸದಸ್ಯರು ಮಹಾಸಭೆಯಲ್ಲಿ ಭಾಗವಹಿಸಿ, ಬಳಗದ ಆಗುಹೋಗುಗಳಲ್ಲಿ ತಮ್ಮ ಸಲಹೆ, ಸೂಚನೆಗಳನ್ನು ನೀಡಬೇಕಾಗಿ ಅಪೇಕ್ಷೆ.

ಮುಂಬರುವ ಬೆಳಕಿನ ಹಬ್ಬ ದೀಪಾವಳಿಯ ಸಂಭ್ರಮದ ಸಂದರ್ಭದಲ್ಲಿ ತಮಗೆಲ್ಲರಿಗೂ ಹಾರ್ದಿಕ ಶುಭಾಶಯಗಳು.

(ವಿಜಯಲಕ್ಷ್ಮಿ ಭಟ್ ಎಸ್.)

## Executive Committee Members : 2020-2022

| Name | Contact Numbers |
|---|---|
| ***President*** | |
| Smt. Vijayalakshmi Bhat S. | 98441 52107 |
| ***Vice Presidents*** | |
| B. Ramachandra Upadhya | 99024 00072 |
| S. Haridas Upadhya | 94480 01892 |
| ***Secretary*** | |
| M.K. Gurumurthy | 98440 22692 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| Smt. Shobha Radhakrishna | 98447 25547 |
| **Convener, Religious Wing** | |
| P N Vishnumurthy Kuddannaya | 94803 05426 |
| **Convener, Youth Wing** | |
| K. Gopala Krishna | 99801 28049 |
| ***Convener, Edn. Assistance Programme*** | |
| Sharath Chandra S.N. | 98860 40271 |
| ***Convener, Public Relation Wing*** | |
| Y. Jayantha Rao | 94482 74519 |
| ***Convener, Membership Devt. Wing*** | |
| M. Krishna Prasad | 98450 18183 |
| ***Convener, Community Services*** | |
| Dr. K.N. Adiga Adoor | 94488 48154 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Smt. Geetha Vasudeva Rao | 98808 99997 |
| H. Ramesh Bhat | 98450 24708 |
| P.C. Rao | 98444 46309 |
| T.S. Nagaraja Upadhyaya | 93412 26763 |
| M Mohan Rao | 98453 79956 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| U A P Ballal | 99860 28602 |
| S T R Madi | 99029 77948 |
| ***Special Invitees*** | |
| Smt. Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| Smt. Geetha P.R. Rao | 99459 38411 |
| Y. Radha Krishna | 98440 58851 |
| Prakash K Bhat | 98455 06777 |
| N Srinivasa Rao | 98455 22165 |

ಒಳಪುಟಗಳಲ್ಲಿ.....


ಅಧ್ಯಕ್ಷರ ಮಾತು ... 1
ಸಂಪಾದಕೀಯ ... 3
ವಾರ್ಷಿಕ ಮಹಾಸಭೆ ನೋಟೀಸು ... 5
ಯುವ ವಿಭಾಗದಿಂದ ಗಣೋಶೋತ್ಸವ ... 7
ಆನ್‌ಲೈನ್ ಪ್ರತಿಭಾ ಸ್ಪರ್ಧೆಗಳು ... 8
ಸಂಗೀತೋತ್ಸವ ... 11
ವಿಶೇಷ ದಿನಗಳು ... 13
ವ್ಯಾಸಂಗ ಸಹಾಯ ಯೋಜನೆ – ವಿವರ ... 14
ಫುಲ್ ಪೈಸಾ ವಸೂಲ್ ... 15
ನಾನು, ನಾನು ಮತ್ತು ನಾನು ... 17
ಹೊಸ ಸದಸ್ಯರಿಗೆ ಸ್ವಾಗತ ... 19
ಗುರು ವಾದಿರಾಜ – ರವಿಕೋಟಿ ತೇಜ ... 20
ಸುದ್ದಿ ಸಂಗ್ರಹ ... 23


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ–ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ–ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :


**ಎಂ. ಸತ್ಯನಾರಾಯಣ ಭಟ್**
"ಕೃಷ್ಣ ಕೃಪಾ", 12/1, 5ನೇ ಮೈನ್, ಇಟ್ಟುಮಡು
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085
E-mail: msbhat1958@gmail.com

# ಸಂಪಾದಕೀಯ.....

ಓದುಗ ಮಿತ್ರರೇ,

ನಮ್ಮ ಆನಂದ ಬಳಗದ ತ್ರೈಮಾಸಿಕ ಮುಖಪತ್ರಿಕೆ ಭೃಗುವಾಣಿಯ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುವ ಸದವಕಾಶ ಮತ್ತೊಮ್ಮೆ ಲಭಿಸಿದೆ. ಶ್ರೀಮತಿ ಗೀತಾ ವಾಸುದೇವರಾವ್ ರವರು ಅಧ್ಯಕ್ಷರಾಗಿದ್ದ ನಾಲ್ಕು ವರ್ಷಗಳ ಅವಧಿಯಲ್ಲಿ ಭೃಗುವಾಣಿಯ ಪ್ರಕಟಣೆಯನ್ನು ನಿರ್ವಹಿಸುತ್ತಿದ್ದ ನಮ್ಮ ತಂಡವನ್ನೇ 2020–2022ರ ನೂತನ ಕಾರ್ಯಕಾರಿ ಸಮಿತಿಯು ಕೂಡಾ ಮುಂದುವರಿಸಿದ್ದು, ಬಳಗದ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಭಟ್ ಮತ್ತು ಸಮಿತಿಯ ಸದಸ್ಯರು ನಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಕೃತಜ್ಞತೆಗಳು ಕಾರ್ಯಕಾರಿ ಸಮಿತಿ ಸದಸ್ಯರ ಮಾರ್ಗದರ್ಶನ ಮತ್ತು ಸಹಕಾರದಿಂದ ಈ ಜವಾಬ್ದಾರಿಯ ನಿರ್ವಹಣೆ ಕಷ್ಟವಾಗಲಾರದು ಎಂಬ ದೃಢವಾದ ನಂಬಿಕೆ ನಮಗಿದೆ.

ಸಂಪಾದಕ ಮಂಡಳಿಗೆ ಈ ಹಿಂದೆ ಬಳಗದ ಯುವ ವಿಭಾಗದ ಸಂಚಾಲಕರಾಗಿದ್ದ ಹಾಗೂ ಈ ಅವಧಿಯಲ್ಲಿ ಸದಸ್ಯತ್ವ ಅಭಿವೃದ್ಧಿ ವಿಭಾಗದ ಸಂಚಾಲಕರಾಗಿರುವ ಶ್ರೀ ಎಂ. ಕೃಷ್ಣ ಪ್ರಸಾದ್‌ರವರು ಹೊಸದಾಗಿ ಸೇರ್ಪಡೆಯಾಗಿದ್ದು, ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರ ಬೆಂಬಲ ನನಗೆ ಹೆಚ್ಚಿನ ಧೈರ್ಯ ತಂದಿದೆ.

ಈ ಹಿಂದೆ ಸುಮಾರು ವರ್ಷಗಳ ಕಾಲ ಸಂಪಾದಕ ಮಂಡಳಿಯಲ್ಲಿ ಸಕ್ರಿಯರಾಗಿದ್ದು, ಕಾಲಕಾಲಕ್ಕೆ ಸಲಹೆ, ಸೂಚನೆಗಳನ್ನು ನೀಡಿ, ತಪ್ಪು–ಒಪ್ಪು ಮನದಟ್ಟು ಮಾಡಿ ಸಹಕರಿಸುತ್ತಿದ್ದ ಹಿರಿಯರಾದ ಶ್ರೀ ಬಿ.ಆರ್. ತಂತ್ರಿಯವರು ಭೃಗುವಾಣಿಯ ಪ್ರಕಟಣೆಗೆ ನೀಡಿದ ಕೊಡುಗೆ ಅನನ್ಯ. ಈ ಸಂದರ್ಭದಲ್ಲಿ ಶ್ರೀ ಬಿ.ಆರ್. ತಂತ್ರಿಯವರಿಗೆ ನಮ್ಮ ಗೌರವಪೂರ್ವಕ ಧನ್ಯವಾದಗಳು.

ನಮ್ಮ ಭೃಗುವಾಣಿ, ಬಳಗದ ಚಟುವಟಿಕೆಗಳ ವರದಿಗಳನ್ನು ಹಾಗೂ ಮುಂಬರುವ ಕಾರ್ಯಕ್ರಮಗಳ ಮಾಹಿತಿಗಳನ್ನು ನೀಡುವುದರ ಜೊತೆಗೆ ಸದಸ್ಯರಿಗೆ ಪ್ರಿಯವಾಗಬಲ್ಲ ಕೆಲವು ಲೇಖನಗಳನ್ನು ಒಳಗೊಂಡರೆ ಮತ್ತಷ್ಟು ಚೆನ್ನ ಎಂಬ ಅಭಿಪ್ರಾಯ ಹೊಸದೇನಲ್ಲ. ನಮ್ಮ ಕೆಲವು ಸದಸ್ಯರು ಆಂಗ್ಲ ಭಾಷೆಯಲ್ಲಿ ಲೇಖನ, ಕವನಗಳನ್ನು ನೀಡಲು ಆಸಕ್ತಿ ತೋರಿಸಿದ್ದು, ರಿಜಿಸ್ಟ್ರಾರ್ ಆಫ್ ನ್ಯೂಸ್‌ಪೇಪರ್ಸ್‌ನಲ್ಲಿ ಭೃಗುವಾಣಿ, ಕನ್ನಡ ಪತ್ರಿಕೆ ಎಂದು ನೋಂದಾಯಿತವಾಗಿರುವುದರಿಂದ ಆಂಗ್ಲ ಲೇಖನಗಳನ್ನು ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಈ ವಿಷಯವನ್ನು ಮನಗಂಡ ಕಾರ್ಯಕಾರಿ ಸಮಿತಿ ಅಗತ್ಯವಿರುವ ಸೂಕ್ತ ಅನುಮತಿಯನ್ನು ಪಡೆಯುವಲ್ಲಿ ಕಾರ್ಯೋನ್ಮುಖವಾಗಿದೆ.

ಭೃಗುವಾಣಿ ಕೇವಲ ಸಂಪಾದಕ ಮಂಡಳಿಯ ಪತ್ರಿಕೆ ಆಗಬಾರದು. ಬಳಗದ ಅನೇಕ ಸದಸ್ಯರಲ್ಲಿ ಬರೆಯುವ ಸೃಜನಶೀಲತೆ ಮತ್ತು ಪ್ರತಿಭೆ ಇದ್ದು, ಅಂತಹ ಸದಸ್ಯ ಮಿತ್ರರು ಭೃಗುವಾಣಿಯಲ್ಲಿ ಪ್ರಕಟಿಸುವುದಕ್ಕಾಗಿ ಲೇಖನ, ಕವನ, ಕಥೆ, ಕಥನ, ಚುಟುಕು, ಚಿಂತನಾತ್ಮಕ ಬರಹ, ಯಶಸ್ಸಿನ ಕಥೆ – ಹೀಗೆ ವಿವಿಧ ಪ್ರಕಾರಗಳ ಹೂರಣವನ್ನು ನಮಗೆ ಆಗಿಂದಾಗ್ಗೆ ನೀಡಿ ಸಂಚಿಕೆಯನ್ನು ರಸವತ್ತಾಗಿ ಮತ್ತು ಆಕರ್ಷಕವಾಗಿ ಹೊರತರಲು ಸಹಕರಿಸಬೇಕಾಗಿ ವಿನಮ್ರ ವಿನಂತಿ.

ಪತ್ರಿಕೆಯ ಖರ್ಚು ವೆಚ್ಚಗಳನ್ನು ಸರಿದೂಗಿಸಲು ಜಾಹೀರಾತುಗಳೂ ಅನಿವಾರ್ಯ. ಸದಸ್ಯರು ತಮ್ಮ ವ್ಯವಹಾರ– ನೀಡುತ್ತಿರುವ ಸೇವೆಗಳ ಬಗ್ಗೆ ಪ್ರಚಾರ ನೀಡಲು ಭೃಗುವಾಣಿ ಸಮರ್ಥ ಮಾಧ್ಯಮವಾಗಿದ್ದು, ಜಾಹೀರಾತು ದರವೂ ತುಂಬಾ ಕಡಿಮೆಯಾಗಿದೆ. ಸದಸ್ಯರು ಇದರ ಸದುಪಯೋಗವನ್ನು ಪಡೆದು ಹೆಚ್ಚು ಜಾಹೀರಾತು ಬೆಂಬಲ ನೀಡುತ್ತಾರೆ ಎಂದು ನಮ್ಮ ನಿರೀಕ್ಷೆ.

ಭೃಗುವಾಣಿ ನಿಮ್ಮ ಪತ್ರಿಕೆ ಅದನ್ನು ಮತ್ತಷ್ಟು ಶ್ರೀಮಂತಗೊಳಿಸಲು, ಸೌಂದರ್ಯವನ್ನು ವರ್ಧಿಸಲು ನಿಮ್ಮ ಸಲಹೆ–ಸೂಚನೆ, ಸಹಕಾರ ಅತ್ಯಗತ್ಯ. ಅದಕ್ಕಾಗಿ ಸದಾ ಎದುರು ನೋಡುತ್ತೇವೆ.

ಪ್ರೀತಿಯ ನಮಸ್ಕಾರಗಳೊಂದಿಗೆ.

**– ಎಂ. ಸತ್ಯನಾರಾಯಣಭಟ್**

# ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಆನಂದ ಬಳಗವು ಪ್ರತಿವರ್ಷದಂತೆ ಈ ವರ್ಷವೂ ಬಳಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಅವರ ಪ್ರತಿಭೆಯನ್ನು ಪುರಸ್ಕರಿಸಲಿದೆ. 2020ರ ಜುಲೈ/ಆಗಸ್ಟ್ ತಿಂಗಳಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು 2ನೇ ಪಿಯುಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು.





**ಪುರಸ್ಕಾರಕ್ಕಾಗಿ ಪರಿಗಣಿಸುವ ಅಂಕಗಳ ವಿವರ**

| | |
|---|---|
| ಎಸ್.ಎಸ್.ಎಲ್.ಸಿ/10ನೇ ತರಗತಿ | ಶೇಕಡಾ 91 ಮತ್ತು ಅದಕ್ಕಿಂತ ಜಾಸ್ತಿ |
| ಸಿ.ಬಿ.ಎಸ್.ಸಿ. | ಸಿ.ಜಿ.ಪಿ.ಎ. 9.6 ಮತ್ತು ಅದಕ್ಕಿಂತ ಜಾಸ್ತಿ |
| ಐ.ಸಿ.ಎಸ್.ಸಿ. | ಶೇಕಡಾ 91 ಮತ್ತು ಅದಕ್ಕಿಂತ ಜಾಸ್ತಿ |
| ದ್ವಿತೀಯ ಪಿ.ಯು.ಸಿ./12ನೇ ತರಗತಿ | ಸೈನ್ಸ್/ವಿಜ್ಞಾನ ಶೇಕಡಾ 90 ಮತ್ತು ಅದಕ್ಕಿಂತ ಜಾಸ್ತಿ<br>ಕಾಮರ್ಸ್/ವಾಣಿಜ್ಯ ಶೇಕಡಾ 90 ಮತ್ತು ಅದಕ್ಕಿಂತ ಜಾಸ್ತಿ<br>ಆರ್ಟ್ಸ್/ಕಲೆ ಶೇಕಡಾ 85 ಮತ್ತು ಅದಕ್ಕಿಂತ ಜಾಸ್ತಿ |

ವಿದ್ಯಾರ್ಥಿಗಳು ತಮ್ಮ ಹೆಸರು, ಭಾವಚಿತ್ರ, ವಿಳಾಸ, ದೂರವಾಣಿ ಸಂಖ್ಯೆ, ತಂದೆ/ತಾಯಿಯ ಹೆಸರು, ಸದಸ್ಯತ್ವ ಸಂಖ್ಯೆ ಮೊದಲಾದ ವಿವರಗಳು ಹಾಗೂ ಅಂಕಪಟ್ಟಿಯ ಪ್ರತಿಯನ್ನು ಆನಂದ ಬಳಗದ ಕಛೇರಿಗೆ ದಿನಾಂಕ 5.11.2020 ರ ಮುಂಚಿತವಾಗಿ ತಲಪುವಂತೆ ಕಳುಹಿಸಲು ಕೋರಲಾಗಿದೆ. ಪ್ರತಿಭಾ ಪುರಸ್ಕಾರಕ್ಕೆ ಶ್ರೇಯಾಂಕದ ಆಧಾರದ ಮೇಲೆ ಎಸ್.ಎಸ್.ಎಲ್.ಸಿ.ಗೆ 25 ಹಾಗೂ ಪಿ.ಯು.ಸಿ.ಗೆ 25 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ದಿನ ಮತ್ತು ಇನ್ನಿತರ ವಿವರಗಳನ್ನು ದೂರವಾಣಿ ಮೂಲಕ ತಿಳಿಸಲಾಗುವುದು.

# ವಧು ವರಾನ್ವೇಷಣೆ – ಸೀಮಿತ ಸೇವೆ



ಆನಂದ ಬಳಗದ ಮಹಿಳಾ ವಿಭಾಗವು ಕಳೆದ ಹಲವಾರು ವರ್ಷಗಳಿಂದ ವಧು–ವರಾನ್ವೇಷಣೆ ಕಾರ್ಯಚಟುವಟಿಕೆಯನ್ನು ನಡೆಸಿಕೊಂಡು ಬಂದಿದೆ. ಹೋಟೆಲ್ ಉಡ್‌ಲ್ಯಾಂಡ್ಸ್‌ನಲ್ಲಿ ಪ್ರತಿ ಬುಧವಾರ ಮತ್ತು ಶನಿವಾರ ಸಂಜೆ ನಡೆಯುತ್ತಿದ್ದ ಈ ಕಾರ್ಯಕ್ರಮದ ಮೂಲಕ ನೂರಾರು ಜೋಡಿಗಳು ಕಂಕಣಭಾಗ್ಯವನ್ನು ಪಡೆದಿವೆ.

ಆದರೆ ಈ ಸೇವೆಯನ್ನು ಕೋವಿಡ್–19 ಕಾರಣದಿಂದಾಗಿ ಇದೀಗ ಸೀಮಿತಗೊಳಿಸುವುದು ಅನಿವಾರ್ಯವಾಗಿದೆ. ವಧು–ವರಾನ್ವೇಷಣೆಯಲ್ಲಿ ಆಸಕ್ತಿಯುಳ್ಳ ಸದಸ್ಯ ಬಂಧುಗಳು ಇದೀಗ ಪ್ರತಿ ಬುಧವಾರ ಮತ್ತು ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12ರ ಒಳಗೆ ಮಹಿಳಾ ಬಳಗದ ಕೋಶಾಧಿಕಾರಿಯಾಗಿರುವ **ಶ್ರೀಮತಿ ವಿಜಯಲಕ್ಷ್ಮಿ ಉಪಾಧ್ಯರವರನ್ನು ಮೊಬೈಲ್ ಸಂಖ್ಯೆ 9449655453** ಮೂಲಕ ಸಂಪರ್ಕಿಸಿ, ವಿವರವನ್ನು ಪಡೆಯಬಹುದಾಗಿದೆ. ದೂರವಾಣಿಯ ಮೂಲಕ ಮಾತ್ರಾ ಹೆಸರನ್ನು ನೋಂದಾಯಿಸಬಹುದು. ಹೀಗೆ ನೋಂದಾಯಿಸಿದವರಿಗೆ ವಧು/ವರ ಹೆಸರು ಮತ್ತು ವಿವರವನ್ನು ಕೋರಿಯರ್ ಮೂಲಕ ಕಳುಹಿಸಲಾಗುವುದು. ಈ ಸಂಬಂಧ ಕಡತಗಳನ್ನು ಪರಿಶೀಲಿಸುವ ಅವಕಾಶ ಸದ್ಯ ಇರುವುದಿಲ್ಲ. ಸದಸ್ಯಬಾಂಧವರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸಹಕರಿಸಬೇಕಾಗಿ ವಿನಂತಿ.

**– ಕಾರ್ಯದರ್ಶಿ, ಮಹಿಳಾ ವಿಭಾಗ**

# ಆನಂದ ಬಳಗ (ರಿ)

ಹೋಟೆಲ್ ಅಜಂತಾ ಆವರಣ, 22 'ಎ', ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001

## ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರ

ಆನಂದ ಬಳಗ (ರಿ) ಬೆಂಗಳೂರು ಇದರ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 22–11–2020ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಅಜಂತಾ ಹೋಟೆಲಿನ ಸಭಾಂಗಣದಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

1. ಪ್ರಾರ್ಥನೆ
2. ಸಭೆಯ ಅಧಿಕೃತ ಚಾಲನೆ – ಅಧ್ಯಕ್ಷರಿಂದ
3. ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸುವುದು.
4. ಸ್ವಾಗತ ಭಾಷಣ
5. 2019–20ನೇ ಸಾಲಿನಲ್ಲಿ ಅಗಲಿದ ಬಳಗದ ಸದಸ್ಯರಿಗೆ ಶ್ರದ್ಧಾಂಜಲಿ.
6. 2018–19ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಕೆಯನ್ನು ಓದಿ ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
7. 2019–20ನೇ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಓದಿ, ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
8. 31 ಮಾರ್ಚ್ 2020ರಂದು ಮುಗಿದ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ, ಚರ್ಚೆ, ಪರಿಶೀಲನೆ ಮತ್ತು ಅಂಗೀಕಾರ.
9. 2020–21ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ.
10. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಬಗ್ಗೆ ಪ್ರಸ್ತಾವನೆ ಮತ್ತು ವಿಚಾರ ವಿನಿಮಯ
11. ವಂದನಾರ್ಪಣೆ

ಸದಸ್ಯರು ಅಧಿಕ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಹಾಜರಿರಬೇಕಾಗಿ ಕೋರಿಕೆ.

ಬೆಂಗಳೂರು — **ಎಂ.ಕೆ. ಗುರುಮೂರ್ತಿ**

ದಿನಾಂಕ 30–09–2020 — ಕಾರ್ಯದರ್ಶಿ

---

**ವಿಶೇಷ ಸೂಚನೆಗಳು**

1. ಪ್ರಶ್ನೆಗಳನ್ನು ಕೇಳಬಯಸುವ ಸದಸ್ಯರು ಮಹಾಸಭೆಯ ಒಂದು ವಾರದ ಮುಂಚಿತವಾಗಿ ತಮ್ಮ ಪ್ರಶ್ನೆಗಳನ್ನು ಲಿಖಿತ ಮುಖೇನ ಆನಂದಬಳಗದ ಕಛೇರಿಗೆ ಕಳುಹಿಸತಕ್ಕದ್ದು.
2. 2019–20ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಪ್ರತಿಯನ್ನು ಸದಸ್ಯರು ಬಳಗದ ಕಛೇರಿಯಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ (ರಜಾ ದಿನಗಳನ್ನುಳಿದು ಇತರ ದಿನಗಳಲ್ಲಿ) ಪಡೆಯಬಹುದು.
3. ಮಹಾಸಭೆಯನ್ನು ಕೇಂದ್ರ/ರಾಜ್ಯ ಸರ್ಕಾರದ ಕೋವಿಡ್–19 ಮಾರ್ಗಸೂಚಿ ಪ್ರಕಾರ ನಡೆಸಬೇಕಾಗಿದ್ದು, ಭಾಗವಹಿಸುವ ಸದಸ್ಯರು ಈ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಕೋರಲಾಗಿದೆ.

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

# ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್
ಬೆಂಗಳೂರು 560 002
ಮೊಬೈಲ್ : 99724 29854



## ಬೃಂದಾವನ ಗೆಸ್ಟ್‌ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ. : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

# ಯುವ ವಿಭಾಗದಿಂದ ಸರಳ ಗಣೇಶೋತ್ಸವ

– ಬಾಲಚಂದ್ರ ತೋಳ್ಪಾಡಿ



ಭಾವೈಕ್ಯತೆಯ ಉದ್ದೇಶವಾಗಿರಿಸಿಕೊಂಡು ಬಾಲ ಗಂಗಾಧರ ತಿಲಕರ ಮುಂದಾಳತ್ವದಲ್ಲಿ ಆಚರಣೆಗೆ ಬಂದ ಗಣೇಶ ಹಬ್ಬ ಅಂದರೆ ಎಲ್ಲರಿಗೂ ಸಂಭ್ರಮ. ಸ್ವಾತಂತ್ರ್ಯ ಹೋರಾಟಕ್ಕಾಗಿ ಸಾರ್ವಜನಿಕರನ್ನು ಏಕೀಕರಣಗೊಳಿಸಲು ತಿಲಕರು ಆಯ್ಕೆ ಮಾಡಿದ್ದೆ ಈ ಗಣೇಶ ಹಬ್ಬವನ್ನು. ಅವರ ಕರೆಗೆ ಜಾತಿ–ಮತ ಬೇಧವಿಲ್ಲದೆ ಎಲ್ಲರೂ ಸ್ಪಂದಿಸುತ್ತಾರೆ.

ದೇಶಾದ್ಯಂತ ಗಣೇಶ ಉತ್ಸವವನ್ನು ಬಹಳ ಸಡಗರ–ಸಂಭ್ರಮದಿಂದ ಆಚರಿಸಲಾಗುತ್ತದೆ. ಅದರಲ್ಲೂ ಉದ್ಯಾನ ನಗರಿ ಬೆಂಗಳೂರಿನಲ್ಲಿ ಆನಂದ ಬಳಗ ಯುವ ವಿಭಾಗದ ವತಿಯಿಂದ ನಡೆಸಿಕೊಂಡು ಬರುವ ಗಣೇಶೋತ್ಸವಕ್ಕೆ ಅದರದೇ ಆದ ವಿಶಿಷ್ಟ ವೈಭವವಿದೆ. ಆದರೆ ಇಡೀ ವಿಶ್ವವನ್ನೇ ತಲ್ಲಣಗೊಳಿಸಿರುವ ಕರೋನಾವೈರಸ್ ಎಂಬ ಮಹಾಮಾರಿಯ ಪರಿಣಾಮ ಈ ವರ್ಷದ ಗಣೇಶೋತ್ಸವದ ಮೇಲೂ ಕರಿನೆರಳು ಬೀರಿದೆ.

ಈ ಹಿನ್ನೆಲೆಯಲ್ಲಿ ಆನಂದ ಬಳಗವು ಆಗಸ್ಟ್ 23 ರಂದು ಬಸವನಗುಡಿಯ ಪುತ್ತಿಗೆ ಮಠದಲ್ಲಿ ಗಣೇಶೋತ್ಸವವನ್ನು ಸರಳ ಮತ್ತು ಭಕ್ತಿಪೂರ್ವಕವಾಗಿ ಸರ್ಕಾರದ ಪರಿಷ್ಕೃತ ಮಾರ್ಗಸೂಚಿಯನ್ವಯ ಆಚರಿಸಬೇಕೆಂದು ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಲಾಯಿತು.


ಅದರಂತೆ ಗಣೇಶೋತ್ಸವಕ್ಕೆ ಪಾಲ್ಗೊಳ್ಳಲು ಆನಂದ ಬಳಗದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಕುಟುಂಬದವರಿಗೆ ಮಾತ್ರ ಅವಕಾಶ ಕಲ್ಪಿಸಿ ಗರಿಷ್ಠ 50 ಸದಸ್ಯರ ಉಪಸ್ಥಿತಿಯಲ್ಲಿ ಸರಳ ರೀತಿಯಲ್ಲಿ ಗಣೇಶೋತ್ಸವ ಆಚರಿಸಲು ನಿರ್ಧರಿಸಲಾಯಿತು.



ಸರ್ಕಾರದ ಪರಿಷ್ಕೃತ ಮಾರ್ಗಸೂಚಿ ಪ್ರಕಾರ ನಾಲ್ಕು ಅಡಿಗಿಂತಲೂ ಹೆಚ್ಚು ಎತ್ತರದ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಅವಕಾಶವಿಲ್ಲ ದಿರುವುದರಿಂದ ಸಾಕಷ್ಟು ಸಂಘಟನೆಗಳು ಎಲ್ಲೆಡೆ ಪುಟ್ಟ ಗಣಪನ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದವು. ಆನಂದ ಬಳಗವೂ ಸರ್ಕಾರದ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಎರಡು ಅಡಿ ಗಣೇಶನ ಪ್ರತಿಷ್ಠಾಪನೆ ಮಾಡಿದ್ದು ಗಮನಾರ್ಹ.

ಬೆಳಿಗ್ಗೆ 9.00 ಘಂಟೆಗೆ ಶುಚಿ ರುಚಿಯಾದ ಫಲಾಹಾರದೊಂದಿಗೆ ಆರಂಭವಾಗಿ ಪುರೋಹಿತರಾದ ವೇದಮೂರ್ತಿ ಶ್ರೀ ವಿಷ್ಣುಮೂರ್ತಿ ಶರಳಾಯ ಅವರ ನೇತೃತ್ವದಲ್ಲಿ ಗೋವರ್ಧನ ಗಿರಿಧಾರಿ ಶ್ರೀಕೃಷ್ಣನ ಸಮ್ಮುಖದಲ್ಲಿ ಆನಂದ ಬಳಗ ಯುವ ವಿಭಾಗದ ಸಂಚಾಲಕರಾದ ಶ್ರೀ ಗೋಪಾಲಕೃಷ್ಣ ಕುಂಜತ್ತಾಯ ದಂಪತಿಗಳು ಎಲ್ಲರ ಶ್ರೇಯೋಭಿವೃದ್ಧಿಗೆ ಪ್ರಾರ್ಥನೆ ಯನ್ನು ಸಲ್ಲಿಸಿ ಆರಂಭವಾದ ಗಣಹೋಮ ಸುಮಾರು ಘಂಟೆ 11.30ಕ್ಕೆ ಪೂರ್ಣಾಹುತಿಯೊಂದಿಗೆ ಸಂಪನ್ನವಾಯಿತು. ಬಳಗದ ಸದಸ್ಯರಿಂದ ಗಣೇಶನಿಗೆ ಹೂವಿನ ಅಲಂಕಾರ, ಮಹಿಳೆಯರಿಂದ ಸುಂದರವಾದ ರಂಗೋಲೆ, ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ದೇವರನಾಮ ಎಲ್ಲವು ಭಕ್ತಿ, ಭಾವದ ಹಾಗೂ ಸೇವೆಯ ಪ್ರತೀಕವಾಗಿದ್ದವು. ಸುಮಾರು 12.30 ಘಂಟೆಗೆ ಗಣೇಶನಿಗೆ ಪೂಜೆ, ಮಹಾಮಂಗಳಾರತಿ ಚೆಂಡೆತಾಳ ಜಾಗಟೆಗಳೊಂದಿಗೆ ಸದೃಶವಾಗಿ ನೋಡಿದ ಕಣ್ಣುಗಳು, ಭಾಗವಹಿಸಿದ್ದ ಮನಸು, ದೇಹ ಪಾವನವಾದವು.

ಸುಮಾರು 1.00 ಘಂಟೆಗೆ ಭೋಜನ ಏರ್ಪಾಡಾಗಿತ್ತು. ನಂತರ ಗಣೇಶನ ವಿಸರ್ಜನೆ ಸಾಂಕೇತಿಕವಾಗಿ ಮಠದ ಆವರಣದಲ್ಲೇ ನಡೆಯಿತು.



# ಸಾಂಸ್ಕೃತಿಕ ವಿಭಾಗದಿಂದ ಮಕ್ಕಳಿಗೆ ಆನ್‌ಲೈನ್ ಪ್ರತಿಭಾ ಸ್ಪರ್ಧೆಗಳು

**ಪ್ರಪಂಚದಾದ್ಯಂತ ಇರುವ ಕೋವಿಡ್–19 ಮಹಾಮಾರಿಯ ದೆಸೆಯಿಂದ ವರ್ಷಂಪ್ರತಿ ನಡೆಯುವ ಮಕ್ಕಳ ಪ್ರತಿಭಾ ಸ್ಪರ್ಧೆಗಳನ್ನು ಸಂಯೋಜಿಸಲು ಅಸಾಧ್ಯವಾದರೂ, ಆನ್‌ಲೈನ್ ಮೂಲಕ ಮಕ್ಕಳಿಗೆ ಸ್ಪರ್ಧೆಗಳನ್ನು ನಡೆಸಿ ಈ ಕೊರತೆಯನ್ನು ನೀಗಿಸುವಲ್ಲಿ ಯಶಸ್ಸು ಸಾಧಿಸಿದೆ ಬಳಗದ ಸಾಂಸ್ಕೃತಿಕ ವಿಭಾಗ. ಬಾಲ ಪ್ರತಿಭೆಗಳನ್ನು ಅನಾವರಣಗೊಳಿಸುವ ಉದ್ದೇಶದಿಂದ 'ಹಾಡೋಣು ಬಾರಾ ಹಾಡೋಣು ಬಾ' ಎಂಬ ಮಕ್ಕಳ ಗಾಯನ ಸ್ಪರ್ಧೆ ಹಾಗೂ 'ನಟನ ಪಠಣ' ಎಂಬ ಶೀರ್ಷಿಕೆಯಲ್ಲಿ ಏಕಪಾತ್ರಾಭಿನಯ ಮತ್ತು ಸಂಸ್ಕೃತ ಶ್ಲೋಕ ಪಠಣ ಸ್ಪರ್ಧೆಯನ್ನು ಈ ವಿಭಾಗವು ಯುವ ವಿಭಾಗದ ಸಹಯೋಗದೊಂದಿಗೆ ಅತ್ಯಂತ ಯೋಜನಾಬದ್ಧವಾಗಿ ನಡೆಸಿದ್ದು, ಸಾಂಸ್ಕೃತಿಕ ವಿಭಾಗದ ಕ್ರಿಯಾಶೀಲ ಸಂಚಾಲಕಿ ಶ್ರೀಮತಿ ಶೋಭಾ ರಾಧಾಕೃಷ್ಣರವರು ಈ ತ್ರಿವಳಿ ಸ್ಪರ್ಧೆಗಳ ವಿವರಗಳನ್ನು ಪ್ರಸ್ತುತ ಪಡಿಸಿದ್ದಾರೆ. – ಸಂ**



ಆನಂದ ಬಳಗದ ಸಾಂಸ್ಕೃತಿಕ ವಿಭಾಗದಿಂದ ನಡೆಯುವ ಕಾರ್ಯಕ್ರಮಗಳಲ್ಲಿ ಅತ್ಯಂತ ಮೆಚ್ಚುಗೆ ಪಡೆಯುವ ಹಾಗೂ ಹೆಚ್ಚು ಜನಪ್ರಿಯವಾಗಿರುವ, ಹೆಚ್ಚಿನ ಸದಸ್ಯರ ಆಕರ್ಷಣೆಯನ್ನು ಕಾಯ್ದುಕೊಂಡಿರುವ ಕಾರ್ಯಕ್ರಮ ಅಂದರೆ ಅದು "ಮಕ್ಕಳ ಪ್ರತಿಭಾಮೇಳ ಹಾಗೂ ಪ್ರತಿಭಾ ಪುರಸ್ಕಾರ" ಎಂಬ ಸಾಂಸ್ಕೃತಿಕ ಕಾರ್ಯಕ್ರಮ. ಹಾಡು, ನೃತ್ಯ, ನೃತ್ಯರೂಪಕ, ಸಣ್ಣ ನಾಟಕಗಳನ್ನು ಒಳಗೊಂಡಿರುತ್ತಿದ್ದ ಈ ಕಾರ್ಯಕ್ರಮ ಬಹುತೇಕ ಬಳಗದ ಸದಸ್ಯರ ನೆಚ್ಚಿನ ಕಾರ್ಯಕ್ರಮ. ಈ ಕಾರ್ಯಕ್ರಮ ಸಾಧಾರಣವಾಗಿ ಆಗಸ್ಟ್ ತಿಂಗಳ 3ನೇ ಅಥವಾ 4ನೇ ಭಾನುವಾರದಂದು ಬೆಂಗಳೂರಿನ ಹೆಸರಾಂತ ರಂಗಮಂದಿರದಲ್ಲಿ ನಡೆಯುತ್ತಿತ್ತು.

ಆದರೆ ಈ ಸಾರಿ ಪ್ರಕೃತಿ ಮಾತೆಯ ಕೋಪದ ಕಾರಣ ಉಂಟಾದ ಈ ಪಿಡುಗಿನ ದೆಸೆಯಿಂದ ಮಕ್ಕಳ ಕಾರ್ಯಕ್ರಮ ನಡೆಸಲು ಸಾಧ್ಯವಾಗಲಿಲ್ಲ. ಆದರೆ ನಮ್ಮ ಮಕ್ಕಳ ಪ್ರತಿಭೆಯನ್ನು ಒರೆಗೆ ಹಚ್ಚುವ, ಅವರ ಉತ್ಸಾಹಕ್ಕೆ ಇಂಬು ಕೊಡುವ ಒಂದೆರೆಡು ಸ್ಪರ್ಧಾ ಕಾರ್ಯಕ್ರಮಗಳು ವಿನೂತನ ರೀತಿಯಲ್ಲಿ ನಡೆದವು. ಎಲ್ಲರ ಸಹಕಾರದಿಂದ ಅದು ಯಶಸ್ವಿಯಾಗಿ ನಡೆಯಿತೆಂದು ತಿಳಿಸಲು ಸಂತೋಷವಾಗುತ್ತದೆ.

ಆನಂದ ಬಳಗದ ಕಾರ್ಯಕಾರಿ ಸಮಿತಿಯೊಂದಿಗೆ ಚರ್ಚಿಸಿ, ಮಕ್ಕಳಿಗಾಗಿ Whatsapp ಮೂಲಕ ಗಾಯನ ಸ್ಪರ್ಧೆ ನಡೆಸುವುದೆಂದು ತೀರ್ಮಾನಿಸಲಾಯಿತು.

'ಹಾಡೋಣು ಬಾರ ಹಾಡೋಣು ಬಾ' ಎಂಬ ಗಾಯನ ಸ್ಪರ್ಧೆ ಜುಲೈ 11 ರಿಂದ ಜುಲೈ 19ರವರೆಗೆ ನಡೆಯಿತು. ಇದು ಹಾಡಿನ ವಿಡಿಯೋವನ್ನು ರೆಕಾರ್ಡ್ ಮಾಡಿ Whatsapp ಮೂಲಕ ನಮ್ಮ ಬಳಗದ ಗ್ರೂಪ್‌ಗಳಿಗೆ ಕಳುಹಿಸುವಂತದ್ದು. ಸ್ಪರ್ಧೆಯಲ್ಲಿ ಎರಡು ವಯೋಮಿತಿಗಳಿದ್ದವು :

I. ಬಾಲ ವಿಭಾಗ II. ಕಿಶೋರ ವಿಭಾಗ

ಎರಡೂ ವಿಭಾಗಗಳಲ್ಲಿ ಮೂರು ವಿಧದ ಹಾಡಿನ ಸ್ಪರ್ಧೆಗಳು

1. ದೇವರನಾಮ, ಭಕ್ತಿಗೀತೆ, ಭಜನ್ಸ್
2. ಭಾವಗೀತೆ, ಜನಪದಗೀತೆ, ಗಜಲ್ಸ್
3. ಚಲನಚಿತ್ರ ಗೀತೆಗಳು

ಜುಲೈ 11 ರಂದು ಬೆಳಗ್ಗೆ 6 ಗಂಟೆಗೆ ಸ್ಪರ್ಧೆ ಆರಂಭವಾಯಿತು. ಮೊದಲೆರಡು ದಿನಗಳಲ್ಲಿ ಮಕ್ಕಳ ಹಾಡಿನ ವಿಡಿಯೋಗಳು ನಿಧಾನವಾಗಿ ಬರಲು ಪ್ರಾರಂಭವಾಯಿತು. ನಂತರದ ದಿನಗಳಲ್ಲಿ ಮಕ್ಕಳ ಹಾಡಿನ ವಿಡಿಯೋಗಳು ಆನಂದ ಬಳಗದ ಐದು ಗ್ರೂಪ್ A B C D E ಗಳಲ್ಲಿ ಸತತವಾಗಿ ಬರಲು ಪ್ರಾರಂಭವಾಯಿತು. ಮಕ್ಕಳ ಹಾಡಿನ ಶೈಲಿ, ಭಾವ, ಶೃತಿ, ರಾಗ, ಆಸಕ್ತಿ ನೋಡುವ ಹಾಗೂ ಕೇಳುವ ಎಲ್ಲಾ ಸದಸ್ಯರಿಗೂ ಮುದ ತಂದಿತು. ಪ್ರತಿಯೊಬ್ಬ ಮಗುವೂ ಉತ್ಸಾಹದಿಂದ ತುಂಬಾ ಶ್ರಮವಹಿಸಿ ಕಲಿತು ಕ್ಯಾಮರದ ಮುಂದೆ ನಿಂತು, ಕುಳಿತು ಹಾಡಿ, ನಮಗೆ ವಿಡಿಯೋ ಮಾಡಿ ಕಳುಹಿಸಿದರು.

ಕಿಶೋರ ವಿಭಾಗದಲ್ಲಿ ಮಕ್ಕಳ ಹಾಡಿನ ಗುಣಮಟ್ಟ ಅತಿ ಅದ್ಭುತವಾಗಿತ್ತು. ಯಾವುದೇ ಹಾಡನ್ನಾದರೂ ಅಷ್ಟೇ

ಸುಲಲಿತವಾಗಿ ಹಾಡುವ ಅವರ ಪ್ರತಿಭೆ ಕಂಡು ಪ್ರಶಂಸೆಯ ಮಹಾಪೂರವೇ ಹರಿದುಬಂದಿತು.

ಮಕ್ಕಳ ಉತ್ಸಾಹದಿಂದ ಭಾಗವಹಿಸುವಿಕೆ, ತಂದೆ ತಾಯಿಯರ ಪ್ರೋತ್ಸಾಹ, ಅಜ್ಜ ದೊಡ್ಡ ಹಾಗೂ ಪೋಷಕರ ಹುರಿದುಂಬಿಸುವಿಕೆ ಕಂಡು ಎಲ್ಲರೂ ಬಹಳ ಸಂತೋಷಪಟ್ಟರು. 19ನೇ ತಾರೀಖು ರಾತ್ರಿ 10 ಗಂಟೆಗೆ ಕಾರ್ಯಕ್ರಮ ಮುಕ್ತಾಯವಾಗುವ ಸಮಯಕ್ಕೆ ನಮಗೆ 148 ಹಾಡಿದ ವಿಡಿಯೋಗಳು ಲಭ್ಯವಾಗಿದ್ದವು. ಭಾಗವಹಿಸಿದ ಮಕ್ಕಳ ಸಂಖ್ಯೆ 98 (ಅಂದರೆ ಒಬ್ಬ ಸ್ಪರ್ಧಿ ಎರಡು ರೀತಿಯ ಹಾಡುಗಳನ್ನು ಹಾಡಬಹುದಿತ್ತು) ಒಂದು ವಾರ ನಿರಂತರ ಹಾಡಿನ ಉತ್ಸವದಲ್ಲಿ ಇಡೀ ಆನಂದ ಬಳಗವೇ ಪಾಲ್ಗೊಂಡಿತು.

ನಂತರ ಒಂದು ತೀರ್ಪುಗಾರರ ತಂಡದಿಂದ ಈ ಸ್ಪರ್ಧೆಯ ತೀರ್ಪುಗಾರಿಕೆ ಮಾಡಿಸಲಾಯಿತು. ತೀರ್ಪುಗಾರರಿಗೆ ತೀರ್ಪು ನೀಡಲಿಕ್ಕೆ ಬಹಳ ಸಮಯ ತಗುಲಿತೆಂದು ತಿಳಿಯಿತು. ನಂತರ ಜುಲೈ 31 ರಂದು 'ಹಾಡೋಣ ಬಾರ ಹಾಡೋಣು ಬಾ' ಸ್ಪರ್ಧೆಯ ಫಲಿತಾಂಶವು ಪ್ರಕಟಗೊಂಡಿತು. ವಿವರ ಈ ರೀತಿ ಇದೆ :

### I. ಬಾಲ ವಿಭಾಗ

**1. ದೇವರನಾಮು/ಭಕ್ತಿಗೀತೆ**

ಮೊದಲನೇ ಬಹುಮಾನ: ಸಾನ್ವಿ .ಪಿ
ಎರಡನೇ ಬಹುಮಾನ : ಧನ್ಯ ಡಿ. ರಾವ್
ಮೂರನೇ ಬಹುಮಾನ : ಸಂಪದ ಆಚಾರ್ಯ

**2. ಭಾವಗೀತೆ / ಜನಪದಗೀತೆ**

ಮೊದಲನೇ ಬಹುಮಾನ: ಸಾನ್ವಿ .ಪಿ
ಎರಡನೇ ಬಹುಮಾನ : ಮಹಿಮಾ .ಪಿ

**3. ಚಲನಚಿತ್ರ ಹಾಡುಗಳು**

ಮೊದಲನೇ ಬಹುಮಾನ: ನಿಹಿರಾ ರಾವ್
ಎರಡನೇ ಬಹುಮಾನ : ಅಪ್ರಮೇಯ ರಾವ್

### II. ಕಿಶೋರ ವಿಭಾಗ

**1. ದೇವರನಾಮು/ಭಕ್ತಿಗೀತೆ**

ಮೊದಲನೇ ಬಹುಮಾನ: ವಿಜಯಶ್ರೀ ಗುರುಮೂರ್ತಿ
ಎರಡನೇ ಬಹುಮಾನ : ಆದಿತ್ಯ ಕೆದಿಲಾಯ
ಮೂರನೇ ಬಹುಮಾನ : ಶ್ರೀಹರಿ ಸರಳಾಯ

**2. ಭಾವಗೀತೆ / ಜನಪದಗೀತೆ**

ಮೊದಲನೇ ಬಹುಮಾನ: ಆದಿತ್ಯ ಕೆದಿಲಾಯ
ಎರಡನೇ ಬಹುಮಾನ : ವಿಜಯಶ್ರೀ ಗುರುಮೂರ್ತಿ

**3. ಚಲನಚಿತ್ರ ಹಾಡುಗಳು**

ಮೊದಲನೇ ಬಹುಮಾನ: ವರ್ಣಿಕ ಉಡುಪ
ಎರಡನೇ ಬಹುಮಾನ : ಧ್ರುವ ಸರಳಾಯ ಹಾಗೂ ಆರಭಿ ಭಟ್

'ಹಾಡೋಣು ಬಾರ ಹಾಡೋಣು ಬಾ' ಯಶಸ್ವೀ ಪ್ರಯೋಗದ ನಂತರ ಮಕ್ಕಳ ಇನ್ನೊಂದು ಸ್ಪರ್ಧೆ ನಡೆಸುವುದೆಂದು ತೀರ್ಮಾನಿಸಲಾಯಿತು. ಅದೇ 'ನಟನ ಪಠಣ' ನಟನ ಎಂದರೆ ಏಕಪಾತ್ರಾಭಿನಯ. ಪಠಣ ಎಂದರೆ ಸಂಸ್ಕೃತ ಶ್ಲೋಕ ಪಠಣ, ಆಗಸ್ಟ್ 9 ರಿಂದ ಆಗಸ್ಟ್ 17ರವರೆಗೆ ಈ ಸ್ಪರ್ಧಾ ಕಾರ್ಯಕ್ರಮ ಜರುಗಿತು. ಸಂಸ್ಕೃತ ಶ್ಲೋಕ ವಿಭಾಗದಲ್ಲಿ 5 ರಿಂದ 7 ವರ್ಷದ ಮಕ್ಕಳು ತಮಗೆ ಇಷ್ಟವಾದ ಯಾವುದೇ ಸಂಸ್ಕೃತ ಶ್ಲೋಕವನ್ನು ಕಂಠಪಾಠ ಮಾಡಿ ಹೇಳಬೇಕಿತ್ತು. 'ಆಹಾ' ಮಕ್ಕಳು ಶ್ರದ್ಧೆಯಿಂದ ಸಾಂಪ್ರದಾಯಿಕ ಉಡುಗೆ ತೊಟ್ಟು ಶುದ್ಧವಾಗಿ, ಸ್ಪಷ್ಟವಾಗಿ ಸಂಸ್ಕೃತ ಶ್ಲೋಕ ಪಠಿಸುವುದನ್ನು ನೋಡಲು ಕೇಳಲು ಬಹಳ ಸೊಗಸಾಗಿತ್ತು.

8 ರಿಂದ 10 ವರ್ಷದ ಮಕ್ಕಳು ಭಗವದ್ಗೀತೆಯ ಪುರುಷೋತ್ತಮ ಯೋಗ (ಅಧ್ಯಾಯ 15) ಆರಂಭದ 10 ಶ್ಲೋಕಗಳು ಅಥವಾ ವೆಂಕಟೇಶ ಸ್ತೋತ್ರ ಯಾವುದಾದರೂ ಒಂದನ್ನು ಕಂಠಪಾಠ ಮಾಡಿ ಹೇಳಬೇಕಿತ್ತು. ಇಲ್ಲಿಯೂ ಕೂಡ ಮಕ್ಕಳು ಕಂಠಪಾಠ ಮಾಡಿ ಸ್ಪಷ್ಟ ಉಚ್ಚಾರದಿಂದ ಶ್ಲೋಕಗಳನ್ನು ಪಠಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಬಳಗದ ಮಕ್ಕಳ ಈ ಪ್ರತಿಭೆ ನಮ್ಮ ಸಂಸ್ಕೃತಿಯನ್ನು ಎತ್ತಿಹಿಡಿದು ಮುಂದೆಯೂ ಅದನ್ನು ಕೊಂಡೊಯ್ಯುವ ಭರವಸೆ ಮೂಡಿಸಿತು.

ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ 11 ರಿಂದ 16 ವರ್ಷದ ಮಕ್ಕಳು ಅದ್ಭುತವಾಗಿ ಅಭಿನಯಿಸಿದರು. ಅವರ ಮಾತುಗಾರಿಕೆ, ಹಾವ ಭಾವ ಪಾತ್ರಕ್ಕೆ ಬೇಕಾದ ರೀತಿಯಲ್ಲಿ ಮಾತನಾಡುವಿಕೆ. ಎಲ್ಲಕ್ಕಿಂತ ಹೆಚ್ಚು ಅವರಲ್ಲಿನ ಆ ಆತ್ಮವಿಶ್ವಾಸ ಎಲ್ಲರನ್ನೂ ಸೆರೆ ಹಿಡಿಯಿತು. ಆನಂದ ಬಳಗದ ಮಕ್ಕಳಲ್ಲಿ ಇರುವ ಪ್ರತಿಭೆಗೆ ಎಲ್ಲರೂ ಶಹಭಾಸ್ ಎಂದರು.

ಹಲವು ಪೋಷಕರ ವಿನಂತಿಯ ಮೇರೆಗೆ ಈ ಸ್ಪರ್ಧೆಯ ದಿನಾಂಕವನ್ನು ಆಗಸ್ಟ್ 21ರವರೆಗೆ ಮುಂದೂಡಲಾಯಿತು. ನಟನ-ಪಠಣ ಸ್ಪರ್ಧೆಯಲ್ಲಿ ಒಟ್ಟು 44 ಮಕ್ಕಳು ಭಾಗವಹಿಸಿದ್ದು, ಆಗಸ್ಟ್ 24 ರಂದು ಫಲಿತಾಂಶ ಪ್ರಕಟಗೊಂಡಿತು. ವಿವರ ಈ ರೀತಿ ಇದೆ :

**ಸಂಸ್ಕೃತ ಶ್ಲೋಕ ಪಠಣ : 5 ರಿಂದ 7 ವರ್ಷದ ಮಕ್ಕಳು**

ಮೊದಲನೇ ಬಹುಮಾನ: ಹಂಸಕೃಷ್ಣ ಶಭರಾಯ
ಎರಡನೇ ಬಹುಮಾನ : ನಿಹಿರಾ ರಾವ್
ಮೂರನೇ ಬಹುಮಾನ : ಮೇಧಾರಾವ್ ಮತ್ತು
ಅಪೂರ್ವ ಖುಷಿ ಅಶ್ವಿನ್

**ಸಂಸ್ಕೃತ ಶ್ಲೋಕ ಪಠಣ : 8 ರಿಂದ 10 ವರ್ಷದ ಮಕ್ಕಳು**

ಮೊದಲನೇ ಬಹುಮಾನ: ಮಹಿಮಾ ಪಿ
ಎರಡನೇ ಬಹುಮಾನ : ಅಚಿಂತ್ಯ ನಿಧಿ ಅಶ್ವಿನ್
ಮೂರನೇ ಬಹುಮಾನ : ಅನಿಹ .ಜಿ ಕಲ್ಕೂರ

**ಏಕಪಾತ್ರಾಭಿನಯ : 10 ರಿಂದ 16 ವರ್ಷದ ಮಕ್ಕಳು**

ಮೊದಲನೇ ಬಹುಮಾನ: ದೀಕ್ಷಾ ಎ. ಭಟ್
ಎರಡನೇ ಬಹುಮಾನ : ಸಾನ್ವಿ .ಪಿ

'ಹಾಡೋಣು ಬಾರ ಹಾಡೋಣು ಬಾ' ಹಾಗೂ ನಟನ ಪಠಣ' ಎರಡೂ ಸ್ಪರ್ಧಾ ಕಾರ್ಯಕ್ರಮಗಳು ಸಾಂಸ್ಕೃತಿಕ ವಿಭಾಗದವರು, ಯುವ ವಿಭಾಗದ ಸಹಯೋಗದಿಂದ ನಡೆಸಿದ ಆನ್‌ಲೈನ್, ವ್ಯಾಟ್ಸ್‌ಆಪ್ ಹಾಡಿನ ಹಾಗೂ ನಟನೆಯ ಕಾರ್ಯಕ್ರಮವಾಗಿತ್ತು. ಸುಮಾರು ಮಾರ್ಚ್ ತಿಂಗಳಿಂದಲೂ ಏಕತಾನದ ಜೀವನ ಕೆಲಸ ಹಾಗೂ ಆನ್‌ಲೈನ್ ಶಾಲೆ ಕರೋನ ಪಿಡುಗಿನ ವಿಷಯಗಳು ಇವುಗಳ ನಡುವೆ ಈ ಸ್ಪರ್ಧೆ ಸ್ವಲ್ಪ ಮಟ್ಟಿನ ಉತ್ಸಾಹ ಹಾಗೂ ಬದಲಾವಣೆ ತಂದಿತು. ಹಲವು ಸದಸ್ಯರು ಅದನ್ನು ವ್ಯಕ್ತಪಡಿಸಿದರು ಕೂಡ. ಈ ಚಿಕ್ಕ ಪ್ರಯತ್ನದಿಂದ ಬಳಗದ ಸದಸ್ಯರ ಪ್ರೀತಿ, ಅಭಿಮಾನ ಹಾಗೂ ಬೆಸುಗೆ ಇನ್ನಷ್ಟು ಗಟ್ಟಿಗೊಂಡಿತು, ಎಂದರೆ ತಪ್ಪಾಗಲಾರದು. ಬಳಗದ ಸದಸ್ಯರ ಸಂಪೂರ್ಣ ಸಹಕಾರ ಹಾಗೂ ಭಾಗವಹಿಸುವಿಕೆ ಮತ್ತು ಕಾರ್ಯಕಾರಿ ಸಮಿತಿಯವರ ಪ್ರೋತ್ಸಾಹದಿಂದ ಸಂಪನ್ನಗೊಂಡ ಈ ಕಾರ್ಯಕ್ರಮ ಎಲ್ಲರಿಗೂ ಖುಷಿ ತಂದಿದ್ದರೆ ಸಾಂಸ್ಕೃತಿಕ ವಿಭಾಗ ಹಾಗೂ ಯುವ ವಿಭಾಗದವರ ಈ ಚಿಕ್ಕ ಶ್ರಮ ಸಾರ್ಥಕ.

## ಸುಂದರ ಮಳೆ...
## ಚೆಲುವಿನ ಇಳೆ...



ಸುಂದರವೀ ಮಳೆ ಮಳೆಯು ಇಳೆ
ಚೆಲುವಿನಾ ಬರೆ ಇಳೆಯು ಮಳೆ ।

ಒತ್ತೊತ್ತಾಗಿ ಸರಿದು ಬಂತು
ಬಾನಲ್ಲಿ ಕಪ್ಪು ಮೋಡಗಳ ದಂಡು
ಅಲ್ಲಲ್ಲಿ ಸುರಿಯ ತೊಡಗಿತು
ಜಿಟಿ ಜಿಟಿ ಮಳೆ ಹನಿಗಳ ಹಿಂಡು ।

ಕರಿಮುಗಿಲ ಬಾನಂಗಳದ ಜೋಕಾಲಿಯಲಿ
ಸುರಿವ ನೀರ ಹನಿಯು ತುಂತುರಲಿ



ತೊಯ್ದು ಹಸಿರಿನ ಗಿಡಮರಗಳ ನಡುವೆ
ಬಾಗಿ ಬಳುಕಿದ ಹೂಹಣ್ಣುಗಳ ಮಾಲೆ ।

ಎಲೆಯು ಮೇಲೆ ನಿಂತು ಜಾರಿದ
ಮಳೆ ನೀರ ಹನಿ ಹನಿ ಬಿಂದು
ಮಣ್ಣಲ್ಲಿ ಕರಗಿ ಒಂದಾಗಿ ಹರಿದು
ಹಿರಿದಾಗಿ ಕೆಸರಾಗಿ ರಂಗು ಕೆಂಪಾಯಿತು ।

ಆ ಕಾರ್ಮೋಡದ ಚಳಿಗೆ ಸುರಿವ ಮಳೆಗೆ
ತಣ್ಣನೆ ಗಾಳಿಗೆ ನಾಚಿ ಮಿಂಚುವ
ಪ್ರಕೃತಿಯ ಸೊಬಗಿನಲಿ ಲೀನವಾಗಿ
ಮೆರವಣಿಗೆ ಹೊರಟಳು ಧರಣಿ ಅನಂತವೆಡೆಗೆ ।

– ಸುಜಾತ ರಮೇಶ್

# ಬಳಗದ ಸಂಗೀತೋತ್ಸವ

**ಆನಂದ ಬಳಗದ ಅಧಿಕೃತ ವಾಟ್ಸಾಪ್ ಗ್ರೂಪ್ ಸದಸ್ಯರು ಹಾಗೂ ಅವರ ಕುಟುಂಬದವರಿಗೆ ಯುವ ವಿಭಾಗದ ವತಿಯಿಂದ ದಿನಾಂಕ 12/09/2020 ರಿಂದ 20/09/2020ರ ವರೆಗೆ ಆಂತರ್ಜಾಲ ಮುಖಾಂತರ ಆಯೋಜಿಸಿದ್ದ ಗಾಯನ ಸ್ಪರ್ಧೆಯ ವಿವರವನ್ನು ತಮ್ಮ ಮುಂದೆ ಅತ್ಯಂತ ಸೊಗಸಾಗಿ ಪ್ರಸ್ತುತಪಡಿಸಿದ್ದಾರೆ – ಬಾಲಚಂದ್ರ ತೋಳ್ಪಾಡಿಯವರು. – ಸಂ.**



ಆಧುನಿಕ ಕಲೆಯಾದ ಚಲನಚಿತ್ರ ಗೀತೆಯ ಜೊತೆಗೆ ಜನಪದಗೀತೆ ಮತ್ತು ಭಾವಗೀತೆ ಗಾಯನದಂತಹ ಭಾರತೀಯ ಸಂಸ್ಕೃತಿಯ ಸ್ಪರ್ಧೆಯನ್ನು ಆಯೋಜಿಸಿ ಎಲ್ಲಾ ರೀತಿಯ ಕಲೆಗೆ ಪ್ರೋತ್ಸಾಹಿಸಿ ನಮ್ಮ ಯುವ ಸಮುದಾಯುವನ್ನು ಜನಪದ ಸಂಸ್ಕೃತಿಯುತ್ತ ಕೊಂಡೊಯ್ಯಲು ಪ್ರಯತ್ನ ಮಾಡುವುದು ಹಾಗೂ ಯುವಜನರಲ್ಲಿ ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಅಭಿಮಾನ ಮೂಡಿಸಲು ಸಹಕಾರಿಯಾಗುವುದು ಯುವ ವಿಭಾಗದ ಮೂಲ ಉದ್ದೇಶವಾಗಿದೆ. ಜೊತೆಜೊತೆಗೆ ಯುವಕರು ತಮ್ಮ ಬದುಕಿನ ಮೂಲಬೇರಾದ ಜನಪದ ಸಂಸ್ಕೃತಿಯ ಬಗ್ಗೆ ತಿಳಿದುಕೊಂಡು ಸಾಹಿತ್ಯಾಭಿಮಾನವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗುವುದು, ಭಾಗವಹಿಸುವವರ ಸೃಜನಶೀಲ ಸಾಮರ್ಥ್ಯದ ಬೆಳವಣಿಗೆಯನ್ನು ಉತ್ತೇಜಿಸುವುದು, ಸ್ಪರ್ಧೆಯಲ್ಲಿ ಭಾಗವಹಿಸುವವರ ಪ್ರದರ್ಶನ ಕೌಶಲ್ಯಗಳ ಸುಧಾರಣೆಗೆ ಸಹಕಾರಿಯಾಗುವುದು ಕೂಡಾ ಅಗತ್ಯವೆಂದು ಯುವ ವಿಭಾಗ ಮನಗಂಡಿದೆ. ಬಳಗದ ಪ್ರತಿಭಾವಂತ ಯುವ ಗಾಯಕರನ್ನು ಗುರುತಿಸುವುದು ಹಾಗೂ ಅವರಿಗೆ ಆನಂದ ಮಿಲನ ವೇದಿಕೆಯಲ್ಲಿ ಹಾಡುವ ಅವಕಾಶ ಕಲ್ಪಿಸಿ ಸ್ವಯಂ ಅಭಿವ್ಯಕ್ತಿಗೆ ಅವಕಾಶಗಳನ್ನು ಒದಗಿಸುವುದು, ಇಂತಹ ಸ್ಪರ್ಧೆಗಳನ್ನು ಆಯೋಜಿಸಿ ಯುವಕರಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಆಸಕ್ತಿ ಮೂಡಿಸಿ ಅದನ್ನು ಕಾರ್ಯಗತ ಗೊಳಿಸುವ ಮೂಲಕ ಯುವಕರ ವ್ಯಕ್ತಿತ್ವದ ಆಧ್ಯಾತ್ಮಿಕ ಸಂಸ್ಕೃತಿಯ ರಚನೆಗೆ ಕೊಡುಗೆ ನೀಡುವುದು ಆನಂದ ಬಳಗದ ಯುವ ವಿಭಾಗದ ಒಟ್ಟಾರೆ ಉದ್ದೇಶ.

ಇಂತಹ ಉದ್ದೇಶವನ್ನು ಇಟ್ಟುಕೊಂಡು ಬಳಗದ ಯುವ ವಿಭಾಗದ ಸಂಚಾಲಕರಾದ ಶ್ರೀ ಗೋಪಾಲಕೃಷ್ಣ ಕುಂಜತ್ತಾಯ ಮತ್ತು ಅವರ ತಂಡದವರು, ಸಾಂಸ್ಕೃತಿಕ ವಿಭಾಗದ ಸಂಚಾಲಕಿಯಾದ ಶ್ರೀಮತಿ ಶೋಭಾ ರಾಧಾಕೃಷ್ಣ ಮತ್ತು ತಂಡದವರ ಸಹಯೋಗದೊಂದಿಗೆ ಬಳಗದ ವಾಟ್ಸಾಪ್ ಗ್ರೂಪ್ ಸದಸ್ಯರಿಗೆ ಗಾಯನ ಸ್ಪರ್ಧೆ ಏರ್ಪಡಿಸುವುವ ಬಗ್ಗೆ ಕಾರ್ಯಕಾರಿ ಸಮಿತಿಯಲ್ಲಿ ಪ್ರಸ್ತಾಪಿಸಲಾಯಿತು. ಸಮಿತಿಯ ಪೂರ್ಣ ಒಪ್ಪಿಗೆ ಹಾಗೂ ಬೆಂಬಲದೊಂದಿಗೆ ಮುಂದಿನ ಕಾರ್ಯಸೂಚಿ ಬಗ್ಗೆ ಉಪಸಮಿತಿಯಲ್ಲಿ ಚರ್ಚಿಸಿ ಗಾಯನ ಸ್ಪರ್ಧೆಯನ್ನು ಆಯೋಜಿಸಲು ತೀರ್ಮಾನಿಸಲಾಯಿತು. ಅದರಂತೆ ಸ್ಪರ್ಧೆಯ ನಿಯಮ ಮತ್ತು ನಿಬಂಧನೆಗಳ ಕರಡನ್ನು ಸಮಿತಿಯಲ್ಲಿ ಮಂಡಿಸಿ ಸಮಿತಿಯ ಅನುಮೋದನೆ ಯೊಂದಿಗೆ ಆನಂದ ಬಳಗದ ಅಧಿಕೃತ 5 ವಾಟ್ಸಾಪ್ ಗ್ರೂಪ್‌ಗಳಿಗೆ ಈ ಸ್ಪರ್ಧೆಯನ್ನು ಸಪ್ಟೆಂಬರ್ 12 ರಿಂದ 20ನೇ ತಾರೀಕಿನವರೆಗೆ ಆಯೋಜಿಸಲು ತೀರ್ಮಾನಿಸ ಲಾಯಿತು.

ಸ್ಪರ್ಧೆಯನ್ನು ದೇವರ ನಾಮ, ಭಾವಗೀತೆ ಹಾಗೂ ಚಲನ ಚಿತ್ರಗೀತೆ ಎಂದು 3 ವರ್ಗಗಳಾಗಿ ವಿಂಗಡಿಸಿ ಸ್ಪರ್ಧೆಯ ನಿಯಮಾವಳಿಯಂತೆ 19 ವರ್ಷ ವಯೋಮಿತಿ ಮೇಲ್ಪಟ್ಟವರು ಯಾವುದೇ 2 ವಿಭಾಗದಲ್ಲಿ ಹಾಡಲು ಅವಕಾಶ ಕೊಡಲಾಯಿತು. ಸ್ಪರ್ಧಿಗಳು ತಮ್ಮ ಹಾಡನ್ನು ವಿಡಿಯೋ ಚಿತ್ರೀಕರಣ ಮಾಡಿ ಸಂಬಂಧ ಪಟ್ಟ ಗ್ರೂಪ್ ಸಂಯೋಜಕರಿಗೆ ಕಳುಹಿಸಬೇಕು. ಸಂಯೋಜಕರು ತಮಗೆ ಕಳುಹಿಸಿದ ವಿಡಿಯೋವನ್ನು ಎಲ್ಲಾ ಗ್ರೂಪ್‌ಗಳಿಗೆ ಪೋಸ್ಟ್ ಮಾಡಬೇಕು. ಅದರಂತೆ ಸ್ಪರ್ಧೆಯು ಸೆಪ್ಟೆಂಬರ್ 12ನೇ ತಾರೀಕಿಗೆ ಆರಂಭಗೊಂಡಿತು.

ಮತ್ತೆ ನಡೆದದ್ದು ಪವಾಡ (miracle) !!

ಬಳಗದ ಸದಸ್ಯರ ಗಾಯನ ಪ್ರತಿಭೆಯ ಅನಾವರಣ. ಯಾರ ನಿರೀಕ್ಷೆಗೂ ನಿಲುಕದ ರೀತಿಯಲ್ಲಿ ಸದಸ್ಯರು ತಮ್ಮ ತಮ್ಮ ಇಂಪಾದ ಗಾಯನದ ವಿಡಿಯೋ ಕಳುಹಿಸಿದರು. ಸಂಗೀತ ಪ್ರಿಯರಿಗೆ ರಸದೌತಣವಿತ್ತರು. ಆನಂದ ಬಳಗದ ಸುಮಾರು 900 ಕುಟುಂಬದವರು ಈ ಅವಿಸ್ಮರಣೀಯ ಕೂಟದಲ್ಲಿ ಪಾಲ್ಗೊಂಡು ಸಂಗೀತ ಲೋಕದಲ್ಲಿ ವಿಹರಿಸಿದರು.

ಒಂದರ ಹಿಂದೆ ಒಂದರ ಹಾಗೆ ನಿರಂತರವಾಗಿ 113 ಹಾಡುಗಳ ವಿಡಿಯೋಗಳು ಬಂದವು. ಸ್ಪರ್ಧೆಯ ಕೊನೆಯ ದಿನವಾದ ಭಾನುವಾರವಂತೂ ಗಾನಲೋಕವೇ ಸೃಷ್ಟಿಯಾಯಿತು. ಒಂದಕ್ಕಿಂತ ಒಂದು ಉತ್ತಮ ಅನ್ನುವ ಹಾಡುಗಳು, ಬಳಗದಲ್ಲಿ ಇಷ್ಟೊಂದು ಪ್ರತಿಭೆಗಳು!

ಕಾರ್ಯಕ್ರಮ ಆಯೋಜಿಸಿದ ಯುವ ಹಾಗೂ ಸಾಂಸ್ಕೃತಿಕ ವಿಭಾಗದವರಲ್ಲಿ ಕೃತಜ್ಞತೆಯ ಹಾಗೂ ಧನ್ಯತೆಯ ಮನೋಭಾವ. ತಮ್ಮ ಕನಸು ಸಾಕಾರಗೊಂಡ ಅನುಭವ.

ಪ್ರಾಯಶಃ ಇಷ್ಟೊಂದು ಉತ್ತಮ ಮಟ್ಟದ ಗಾಯನದ ನಿರೀಕ್ಷೆಯಲ್ಲಿರದ ನಮ್ಮ ತೀರ್ಪುಗಾರರಿಗೆ ಇದೊಂದು ಸವಾಲೆಂದು ಅನ್ನಿಸಿರಬಹುದು. ಸವಾಲನ್ನು ಅಷ್ಟೇ ಚಾಣಾಕ್ಷತನದಿಂದ ಪರಿಹರಿಸಿ ಅತ್ಯಂತ ಸೂಕ್ತ ರೀತಿಯಲ್ಲಿ ಮೌಲ್ಯಮಾಪನ ಮಾಡಿ ತೀರ್ಪು ಕೊಟ್ಟ ನಮ್ಮ ತೀರ್ಪು ಗಾರರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಸ್ಪರ್ಧಿಗಳೂ ವಿಜೇತರೆ. ಆದರೂ ನಿಯಮಾವಳಿಯ ಪ್ರಕಾರ ವಿಜೇತರನ್ನು ಆಯ್ಕೆ ಮಾಡುವುದು ಸಂಪ್ರದಾಯ.

ಅದರಂತೆ ಸ್ಪರ್ಧೆಯಲ್ಲಿ ವಿಜೇತರಾದವರ ಹೆಸರು ಈ ಕೆಳಗಿನಂತಿದೆ.

**ದೇವರ ನಾಮ :**

ಮೊದಲನೇ ಬಹುಮಾನ : ಶ್ರೀಮತಿ ವಿಂಧ್ಯಾ ಸುಭಾಷ್
ಎರಡನೇ ಬಹುಮಾನ : ಶ್ರೀಮತಿ ಸೌಜನ್ಯ ಯಸ್
ಮೂರನೇ ಬಹುಮಾನ : ಶ್ರೀಮತಿ ಸ್ಫೂರ್ತಿ ಆರ್ ಭಟ್

**ಭಾವಗೀತೆ/ಜಾನಪದ :**

ಮೊದಲನೇ ಬಹುಮಾನ : ಶ್ರೀಮತಿ ವಿಂಧ್ಯಾ ಸುಭಾಷ್
ಶ್ರೀ ತೇಜಸ್ ಅಡಿಗ
ಎರಡನೇ ಬಹುಮಾನ : ಶ್ರೀಮತಿ ಸ್ಫೂರ್ತಿ ಆರ್ ಭಟ್
ಮೂರನೇ ಬಹುಮಾನ : ಶ್ರೀ ಸುದರ್ಶನ್ ಶಾಸ್ತ್ರಿ

**ಚಲನ ಚಿತ್ರ ಹಾಡುಗಳು :120**

ಮೊದಲನೇ ಬಹುಮಾನ : ಶ್ರೀ ತೇಜಸ್ ಅಡಿಗ
ಎರಡನೇ ಬಹುಮಾನ : ಶ್ರೀ ಶಶಿಧರ್ ಹೆಬ್ಬಾರ್
ಶ್ರೀಮತಿ ರಕ್ಷಾ ಎಮ್
ಮೂರನೇ ಬಹುಮಾನ : ಶ್ರೀ ಶ್ರೀನಾಥ್ ರಾವ್ ಕೊರ್ಡ್ಕಲ್
ಶ್ರೀ ಶರತ್ ಬಲ್ಲಾಲ್

ಚಲನ ಚಿತ್ರ ಹಾಡುಗಳ ಯುಗಳ ಗೀತೆ ವಿಭಾಗದಲ್ಲಿ ಸ್ಪರ್ಧೆಗೆ ಬೇಕಾದ ಕನಿಷ್ಠ ಸಂಖ್ಯೆಯ ಸದಸ್ಯರು ಇಲ್ಲವಾದುದರಿಂದ ಹಾಗೂ ಹಾಡಿದ ಒಂದು ಹಾಡು ಯುಗಳ ಗೀತೆಯ ವ್ಯಾಪ್ತಿಯಲ್ಲಿ ಬರದೇ ಇರುವ ಕಾರಣ ಅದನ್ನು ಪರಿಗಣಿಸಲಿಲ್ಲ.

ವಿಜೇತರಿಗೆ ಹಾಗೂ ಭಾಗವಹಿಸಿದ ಎಲ್ಲಾ ಸದಸ್ಯರಿಗೂ ಆನಂದ ಬಳಗದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಯುವ ವಿಭಾಗ ಹಾಗೂ ಸಾಂಸ್ಕೃತಿಕ ವಿಭಾಗದ ಸದಸ್ಯರಿಂದ ಹೃತ್ಪೂರ್ವಕ ಧನ್ಯವಾದಗಳು ಹಾಗೂ ಅಭಿನಂದನೆಗಳು.




## ಆನಂದ ಬಳಗದ ಸದಸ್ಯರಾಗಲು ಆಹ್ವಾನ

ಆನಂದ ಬಳಗ ಈಗಾಗಲೇ 2000 ಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ವರ್ಷವಿಡೀ ನಡೆಯುವ ವಿವಿಧ ಕಾರ್ಯಚಟುವಟಿಕೆಗಳ ಮೂಲಕ ಸದಸ್ಯರಿಗೆ ಅತ್ಯಂತ ಪ್ರಿಯವಾಗುತ್ತಿದೆ. ಬಳಗದ ಸದಸ್ಯರು ತಮಗೆ ಪರಿಚಯವಿರುವ ನಮ್ಮ ಸಮಾಜಕ್ಕೆ ಸೇರಿರುವ ಸ್ನೇಹಿತರು, ಬಂಧು–ಬಳಗದವರನ್ನು ಬಳಗದ ಸದಸ್ಯರಾಗಲು ಪ್ರೇರೇಪಿಸಿ, ಬಳಗದ ಸದಸ್ಯ ಶಕ್ತಿಯನ್ನು ಹೆಚ್ಚಿಸಬೇಕಾಗಿ ವಿನಂತಿ.

ಬಳಗದ ಜಾಲತಾಣ www.anandabalaga.org ಯಲ್ಲಿ ಸದಸ್ಯತ್ವ ನೋಂದಣಿಯ ಅರ್ಜಿ ನಮೂನೆಗಳು ಲಭ್ಯವಿದ್ದು, Introduction Formನ್ನು ಸದಸ್ಯರು ತುಂಬಬೇಕು ಹಾಗೂ ಸದಸ್ಯತ್ವ ಅರ್ಜಿಯನ್ನು ಆಸಕ್ತರು ತುಂಬಿ ನಿಗದಿಪಡಿಸಿದ ಅರ್ಜಿ ಶುಲ್ಕದೊಂದಿಗೆ ಬಳಗದ ಕಚೇರಿಗೆ ಸಲ್ಲಿಸಲು ಕೋರಲಾಗಿದೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : **ಶ್ರೀ ಎಂ. ಕೃಷ್ಣ ಪ್ರಸಾದ್**
ಸಂಚಾಲಕರು, ಸದಸ್ಯತ್ವ ಅಭಿವೃದ್ಧಿ ವಿಭಾಗ. (ದೂರವಾಣಿ : 9845018183)

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking***
***Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for***
***Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

*With best compliments*

# FIRETECH

## BOILERS PRIVATE LTD.

(An ISO 9001 : 2015 Certified Company)

**Office:** "FIRETECH HOUSE" , No. 211, 2nd Cross, 38th Main, B.T.M Layout, 2nd Stage, Bangalore - 560 068, Karnataka. Ph.: 080-26683686 / 26683921, Mob. : 73384 87934

**Works:** 121/C2,Bommasandra Industrial Area, Anekal Taluk, Bangalore - 560 099, Karnataka. Ph.: 080-27834189

E-mail : firetechhouse@gmail.com

Website : www.firetechboilers.com

## Manufacturing Steam Boilers (IBR & Non IBR)

- Thermic Fluid Heaters
- Hot Air Generators
- Waste Heat Boilers
- Agro Dryers





- Heat Exchanger
- MDC
- Accumulator etc.,







ಗೃಹ ಹಾಗೂ ವಾಹನ ಸಾಲ
ಕೊಳ್ಳಲು ಸುಲಭ ಕೀಲಿ ಕೈ
ಕೆಬಿಎಲ್ ಅಪ್ನಾ ಘರ್ &
ಕೆಬಿಎಲ್ ಕಾರು ಸಾಲ
ಕೂಡಲೇ ಆಕರ್ಷಕ ರಿಯಾಯಿತಿಗಳ ಲಾಭವನ್ನು ಪಡೆಯಿರಿ
ಡಿಜಿಟಲ್ ಸಾಲ ಗಳಿಗೆ ಬಡ್ಡಿ ದರಗಳ ಮೇಲೆ 0.10% ಹೆಚ್ಚುವರಿ ರಿಯಾಯಿತಿ
ಡಿಜಿಟಲ್ ಮಂಜೂರಾತಿ ಗಳಿಗೆ ಸಂಸ್ಕರಣಾ ವೆಚ್ಚಗಳ ಮೇಲೆ 25% ಹೆಚ್ಚುವರಿ ರಿಯಾಯಿತಿ
ಈ ರಿಯಾಯಿತಿಗಳು ಪಿಎಂಎವೈ ಸ್ಕೀಂ ಡಿಜಿಟಲ್ ಮಂಜೂರಾತಿ ಗಳಿಗೂ ಲಭ್ಯ
ಅತ್ಯಾಕರ್ಷಕ ಬಡ್ಡಿದರಗಳು
ತಕ್ಷಣವೇ ಸಾಲ ಮೊತ್ತ ಮಂಜೂರಾತಿ
ಅತ್ಯಂತ ಸರಳ ಪ್ರಕ್ರಿಯೆ
Follow us on : / KarnatakaBank
ಕರ್ಣಾಟಕ ಬ್ಯಾಂಕ್

# FRIDGE HOUSE

Distributor & Dealer for

**HAVELLS Brand (Lloyd) AC's &**
**CARRIER MIDEA Air Conditioners**



Tower AC




Split AC



Cassette AC



Window AC



Ductable AC

**Contact Persons: Mr. M K Prasad & Mr. B Krishnaswamy – M: 9845330571**

# FRIDGE HOUSE

FRIDGE HOUSE DELIVERING TRUST

EMERSON Climate Technologies AUTHORIZED FULL-LINE WHOLESALER

## Wholesaler & Importers,

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

Kirloskar Enriching Lives

GFL

## EQUIPMENTS & COMPONENTS. for

**HVAC & R,* COLD ROOMS,* RIPENING CHAMBERS,* HEAT PUMPS.**

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
**Email ID :** info@fridgehouse.net; **Web Site:** www.fridgehouse.net


**Contact Persons: M.K. Prasad & Mr. Nagesh D Prabhu – M: 9845217197**

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments from :*

# ಹೋಟೆಲ್ ಶೀತಲ್

**ಆನಂದರಾವ್ ವೃತ್ತ, ಬೆಂಗಳೂರು – 560 009**

## HOTEL Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

---

ಶುಭಾಶಯಗಳನ್ನು ಕೋರುವವರು



॥ ಹರಿಃ ಓಂ ॥

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)



**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

### ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ
ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ
ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು
ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ
ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

### Services Offered :

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking


**For**


- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:

| | |
|---|---|
| MR. DINESH RAO MUNDRUPPADY | MOB: 99456 88955 |
| MR. VASUDEVAN T S | MOB: 98450 26743 |
| MR. VIJAY KUMAR KULKARNI | MOB: 99456 96649 |





ಕತ್ತಲೆಯಿಂದ ಬೆಳಕಿನೆಡೆಗೆ ಸಾಗಲು ದೈವ ಸಾಕ್ಷಾತ್ಕಾರ ಮಂದಿರ...

# ಶ್ರೀ ಕ್ಷೇತ್ರ ಮಂತ್ರಾಲಯ

# ಶ್ರೀ ಗುರುರಾಘವೇಂದ್ರ ಜ್ಯೋತಿಷ್ಯ ಕೇಂದ್ರ

ವೇದಬ್ರಹ್ಮ ಜ್ಯೋತಿಷ್ಯ ರತ್ನಾಕರ, ರಾಷ್ಟ್ರೀಯ ತ್ರಿಕಾಲಜ್ಞಾನಿ

## ಆಚಾರ್ಯ ಶ್ರೀ ವಿಜೇಂದ್ರ ಗುರೂಜೀ

ಕೇರಳ ಪ್ರಧಾನ ತಾಂತ್ರಿಕರು, ಆಧ್ಯಾತ್ಮಿಕ ಚಿಂತಕರು, ಜ್ಯೋತಿಷ್ಯ ವಾಸ್ತು ಮಂತ್ರಶಕ್ತಿ ಪರಿಣಿತರು

ಅಷ್ಟಮಂಗಲ ದೈವ ಪ್ರಶ್ನೆ, ಜಾತಕ, ಹಸ್ತ, ಫೋಟೋ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಸತ್ಯಸಾರಾಂಶವಾಗಿ ನುಡಿಯುತ್ತಾರೆ.

- ಜೀವನದಲ್ಲಿ ಮನುಷ್ಯ ಒಂದಲ್ಲ ಒಂದು ಸಮಸ್ಯೆಗಳಿಂದ ಬಂಧಿ ಆಗಿದ್ದಾನೆ. ಆತ ನೆನೆಯುವುದೇ ಒಂದು ನಡೆಯುವುದೇ ಇನ್ನೊಂದು. ಎಷ್ಟೇ ಪ್ರಾಮಾಣಿಕವಾಗಿ ಜೀವನ ನಡೆಸಿದರೂ ಸಮಸ್ಯೆಗಳು ಬೆಂಬಿಡದೆ ಕಾಡುತ್ತಿರುತ್ತದೆ. ಚಿಂತಿಸಬೇಡಿ ಭಗವಂತ ನಂಬಿದವರನ್ನು ಎಂದಿಗೂ ಕೈ ಬಿಡುವುದಿಲ್ಲ. ಒಬ್ಬ ಗುರುವಿನ ರೂಪದಲ್ಲಿ ಬಂದು ಪ್ರತ್ಯಕ್ಷವಾಗಿ ದಾರಿತೋರಿಸುತ್ತಾನೆ.
- ನಿಮ್ಮ ಭವ್ಯ ಭವಿಷ್ಯದ ಕನಸು ನನಸಾಗಲು **ಆಚಾರ್ಯ ಶ್ರೀ ವಿಜೇಂದ್ರ ಗುರೂಜಿ** ಅವರನ್ನು ಸಂಪರ್ಕಿಸಿ ಅಪಾರ ಜ್ಞಾನ, ವಾಕ್‌ಸಿದ್ಧಿ, ಮಂತ್ರಸಿದ್ಧಿಯಿಂದ ಜನರಲ್ಲಿ ಪ್ರಶಂಸೆ ಪಡೆದಿದ್ದಾರೆ ಹಾಗೂ ಸಾವಿರಾರು ಜನರಿಗೆ ಸಾರ್ಥಕ ಪರಿಹಾರ ನೀಡಿದ ಕೀರ್ತಿ ಪಡೆದಿದ್ದಾರೆ. ಇದು ನಿಜ ಬದುಕಿನ ದಾರಿದೀಪ. ಇಂದೇ ಸಂಪರ್ಕಿಸಿ **ಶ್ರೀ ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಿ** ಆರಾಧಕರು.

ನಿಮ್ಮ ಸಮಸ್ಯೆ ಏನೇ ಇರಲಿ ಅದು ಎಷ್ಟೇ ಕಠಿಣವಾಗಿರಲಿ ಕೇರಳ ಅಥರ್ವಣವೇದದ 60 ವರ್ಷಗಳ ಹಳೆಯ 108 ಜ್ಯೋತಿಷ್ಯ ಬ್ರಹ್ಮ-ತಂತ್ರ ವಿದ್ಯೆಗಳಿಂದ ನೂರಕ್ಕೆ ನೂರರಷ್ಟು ಶಾಶ್ವತ ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯೆಗಳಾದ : ಮಾನಸಿಕ ನೆಮ್ಮದಿ ಇಲ್ಲದಿರುವುದು, ಮನೆಯಲ್ಲಿ ಅಶಾಂತಿ, ದುಷ್ಟಶಕ್ತಿ ತೊಂದರೆ, ಮಕ್ಕಳ ಅಸಭ್ಯ ವರ್ತನೆ, ವಿದ್ಯಾಭ್ಯಾಸ ಹಿನ್ನಡೆ, ವ್ಯಾಪಾರ-ಉದ್ಯೋಗ ನಷ್ಟ, ಮದುವೆ ವಿಳಂಬ, ಪ್ರೇಮ ವಿಚಾರ, ದಾಂಪತ್ಯ ಕಲಹ, ಡೈವರ್ಸ್ ತೊಂದರೆ, ಸಂತಾನ, ಲೈಂಗಿಕ ತೊಂದರೆ, ಆರೋಗ್ಯ ಸಮಸ್ಯೆ, ಕೋರ್ಟ್‌ಕೇಸ್, ಆಸ್ತಿವಿಚಾರ, ಶತ್ರುಕಾಟ, ಮಾಟ-ಮಂತ್ರ ವಶೀಕರಣ ನಿವಾರಣೆ, ಅತ್ತೆ-ಸೊಸೆ ಕಲಹ, ಹಣಕಾಸಿನ ಸಮಸ್ಯೆ ಇನ್ನು ಯಾವುದೇ ಸಮಸ್ಯೆಗಳಿಂದ ಜೀವನದಲ್ಲಿ ಮಾನಸಿಕವಾಗಿ ನೊಂದು ಇನ್ನೊಬ್ಬರ ಬಳಿ ಹೇಳಲಾಗದೆ ಮನಸಿನಲ್ಲಿ ಕೊರಗುತ್ತಿದ್ದರೆ ಚಿಂತಿಸಬೇಡಿ ಉತ್ತಮ ಸಲಹೆ ಶಾಶ್ವತ ಪರಿಹಾರ ಶತಸಿದ್ಧ.

**ವಿ.ಸೂ : ಬಹಳ ವಯಸ್ಸಾಗಿದ್ದರೂ ಮದುವೆ ಆಗದೆ ಬಳಲುತ್ತಿರುವ ವಧು-ವರರಿಗೆ ಅತಿ ಶೀಘ್ರವಾಗಿ ವಿವಾಹ ಪ್ರಾಪ್ತಿ ಆಗಲು ವಿಶೇಷ ಪರಿಹಾರ ಮಾಡಿ ಕೊಡುತ್ತಾರೆ.**

ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ. **ದೂ: 99452 22228**

ಸರ್ವೇ ಜನೋ ಸುಖಿನೋ ಭವಂತು

ಸ್ಥಳ : **ಶ್ರೀಕ್ಷೇತ್ರ ಮಂತ್ರಾಲಯ ಶ್ರೀ ಗುರುರಾಘವೇಂದ್ರ ಜ್ಯೋತಿಷ್ಯ ಸಲಹೆ - ಪರಿಹಾರ ಕೇಂದ್ರ**
157, 1ನೇ ಮಹಡಿ, ಶ್ರೀರಾಮ ಪ್ಲಾಜಾ, ಸತೀಶ್ ಸ್ಟೋರ್ ಎದುರು, ಡಿ.ವಿ.ಜಿ. ರೋಡ್, ಬಸವನ ಗುಡಿ, ಬೆಂಗಳೂರು - 04

ಬರುವ ಮೊದಲು ದೂರವಾಣಿ ಮೂಲಕ ಭೇಟಿಯ ಸಮಯ ಖಚಿತಪಡಿಸಿಕೊಂಡು ಬನ್ನಿ

**ಸಮಯ: ಬೆಳಿಗ್ಗೆ 11.00 ರಿಂದ ರಾತ್ರಿ 9.00**

## ● ಅಕ್ಟೋಬರ್ 2020 – ಜನವರಿ 2021 ರ ಅವಧಿಯ ವಿಶೇಷ ದಿನಗಳು ●

| | | |
|---|---|---|
| ಅಕ್ಟೋಬರ್ 17, ಶನಿವಾರ | – | ತುಲಾ ಸಂಕ್ರಮಣ ನಿಜ ಆಶ್ವಯುಜ ಮಾಸಾರಂಭ, ನವರಾತ್ರಿ ಆರಂಭ |
| ಅಕ್ಟೋಬರ್ 21, ಬುಧವಾರ | – | ಲಲಿತಾ ಪಂಚಮಿ ಶಾರದ ಪೂಜಾರಂಭ |
| ಅಕ್ಟೋಬರ್ 25, ಭಾನುವಾರ | – | ಮಹಾನವಮಿ |
| ಅಕ್ಟೋಬರ್ 26, ಸೋಮವಾರ | – | ವಿಜಯದಶಮಿ ಮಧ್ವಜಯಂತಿ |
| ಅಕ್ಟೋಬರ್ 27, ಮಂಗಳವಾರ | – | ಸರ್ವೈಕಾದಶೀ |
| ಅಕ್ಟೋಬರ್ 28, ಬುಧವಾರ | – | ದ್ವಿದಳ ವ್ರತಾರಂಭ |
| ಅಕ್ಟೋಬರ್ 30, ಶುಕ್ರವಾರ | – | ಕೋಜಾಗರೀ ಪೂಜೆ |
| ಅಕ್ಟೋಬರ್ 31, ಶನಿವಾರ | – | ಹುಣ್ಣಿಮೆ, ವಾಲ್ಮೀಕಿ ಜಯಂತಿ |
| ನವೆಂಬರ್ 01, ಭಾನುವಾರ | – | ಕನ್ನಡ ರಾಜ್ಯೋತ್ಸವ |
| ನವೆಂಬರ್ 11, ಬುಧವಾರ | – | ಸರ್ವೈಕಾದಶೀ |
| ನವೆಂಬರ್ 14, ಶನಿವಾರ | – | ನರಕಚತುರ್ದಶೀ |
| ನವೆಂಬರ್ 15, ಭಾನುವಾರ | – | ಅಮಾವಾಸ್ಯೆ |
| ನವೆಂಬರ್ 16, ಸೋಮವಾರ | – | ಕಾರ್ತಿಕ ಮಾಸಾರಂಭ ಬಲಿಪಾಡ್ಯಮಿ ವೃಶ್ಚಿಕ ಸಂಕ್ರಮಣ |
| ನವೆಂಬರ್ 26, ಗುರುವಾರ | – | ವೈಷ್ಣವೈಕಾದಶೀ |
| ನವೆಂಬರ್ 27, ಶುಕ್ರವಾರ | – | ಉತ್ಥಾನ ದ್ವಾದಶೀ |
| ನವೆಂಬರ್ 30, ಸೋಮವಾರ | – | ಹುಣ್ಣಿಮೆ |
| ದಶಂಬರ 03, ಗುರುವಾರ | – | ಕನಕದಾಸ ಜಯಂತಿ |
| ದಶಂಬರ 11, ಶುಕ್ರವಾರ | – | ಸರ್ವೈಕಾದಶೀ |
| ದಶಂಬರ 14, ಸೋಮವಾರ | – | ಸೋಮವತೀ ಅಮಾವಾಸ್ಯೆ |
| ದಶಂಬರ 15, ಮಂಗಳವಾರ | – | ಹೇಮಂತ ಋತು, ಮಾರ್ಗಶಿರ ಮಾಸ ಆರಂಭ ಧನು ಸಂಕ್ರಮಣ |
| ದಶಂಬರ 20, ಭಾನುವಾರ | – | ಸುಬ್ರಹ್ಮಣ್ಯ ಷಷ್ಠೀ |
| ದಶಂಬರ 25, ಶುಕ್ರವಾರ | – | ಸರ್ವೈಕಾದಶೀ |
| ದಶಂಬರ 30, ಬುಧವಾರ | – | ಹುಣ್ಣಿಮೆ |
| ಜನವರಿ 01, 2021, ಶುಕ್ರವಾರ | – | ಹೊಸ ಇಸವಿ 2021 ಆರಂಭ |
| ಜವವರಿ 09, ಶನಿವಾರ | – | ಸರ್ವೈಕಾದಶೀ |
| ಜನವರಿ 13, ಬುಧವಾರ | – | ಎಳ್ಳಮವಾಸ್ಯೆ |
| ಜನವರಿ 14, ಮಂಗಳವಾರ | – | ಮಕರ ಸಂಕ್ರಮಣ, ಪುಷ್ಯ ಮಾಸಾರಂಭ |

**(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)**



## ಭಕ್ತಿಪೂರ್ವಕ ನಮನ

ಕಾಸರಗೋಡು ಜಿಲ್ಲೆಯ ಶ್ರೀ ಎಡನೀರು ಮಠಾಧೀಶರಾದ ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತಿ ಶ್ರೀಪಾದಂಗ ಳವರು ದಿ. 6.9.2020 ರಂದು ದೈವಾಧೀನ ರಾಗಿರುವುದು ಬಳಗಕ್ಕೆ ಅತ್ಯಂತ ದುಃಖದ ವಿಚಾರ. ಪೂಜ್ಯ ಪೇಜಾವರ ಮಠಾಧೀಶ ವಿಶ್ವೇಶತೀರ್ಥ ಸ್ವಾಮೀಜಿ ನಂತರ ಅತೀ ಹೆಚ್ಚು ಬಾರಿ ಚಾತುರ್ಮಾಸ್ಯ ವ್ರತವನ್ನು ಕೈಗೊಂಡಿರುವ ಕೀರ್ತಿಗೆ ಪಾತ್ರರಾದ ಶ್ರೀಗಳು ತಮ್ಮ 60ನೇ ಚಾತುರ್ಮಾಸ್ಯ ವ್ರತಾಚರಣೆಯನ್ನು ದಿ. 2.9.2020 ರಂದು ಸಂಪನ್ನಗೊಳಿಸಿದ್ದರು. ಶ್ರೀ ಶಂಕರಾಚಾರ್ಯರ ಶಿಷ್ಯ ಶ್ರೀ ತೋಟಕಾಚಾರ್ಯ ಪರಂಪರೆಗೆ ಸೇರಿದ ಈ ಅಪೂರ್ವ ಮಠದ ಪರಂಪರೆಯಲ್ಲಿ 1960ರಲ್ಲಿ ಪೀಠಾಧಿಪತಿಗಳಾಗಿ ಪೀಠಾರೋಹಣ ಮಾಡಿದ ಪೂಜ್ಯ ಕೇಶವಾನಂದ ಭಾರತಿ ಸ್ವಾಮೀಜಿಯರು ಧರ್ಮ, ಕಲೆಗಳನ್ನು ಸಮನ್ವಯ ಗೊಳಿಸಲು ಶ್ರಮಿಸಿದ ಅಪರೂಪದ ಮಠಾಧಿಪತಿ ಗಳಾಗಿದ್ದರು. ಸ್ವತಃ ಕಲಾವಿದರಾಗಿದ್ದ ಶ್ರೀಪಾದಂಗಳು ಸಂಗೀತ, ಯಕ್ಷಗಾನ ಕಲೆಗಳ ಮಹಾನ್ ಪೋಷಕರಾಗಿದ್ದು, ಯಕ್ಷಗಾನ ಮಂಡಳಿಯನ್ನು ಸ್ಥಾಪಿಸಿ ದೀರ್ಘಕಾಲ ಮುನ್ನಡೆಸಿದ್ದಾರೆ ಸ್ವಾಮೀಜಿಯವರಿಗೆ ಬಳಗದ ಭಕ್ತಿಪೂರ್ವಕ ನಮನಗಳು.

# ಬಳಗದ ವ್ಯಾಸಂಗ ಸಹಾಯ ಯೋಜನೆ

ನಮ್ಮ ಸಮಾಜದಲ್ಲಿರುವ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ಅನಾನುಕೂಲತೆಯಿಂದಾಗಿ ವೃತ್ತಿಪರ ಉನ್ನತ ಶಿಕ್ಷಣವನ್ನು ಪಡೆಯುವುದರಿಂದ ವಂಚಿತರಾಗಬಾರದು ಎಂಬ ಮೂಲ ಉದ್ದೇಶದಿಂದ ಆನಂದ ಬಳಗವು 2000ನೇ ಇಸವಿಯಲ್ಲಿ ಪ್ರಾರಂಭಿಸಿರುವ ವ್ಯಾಸಂಗ ಸಹಾಯ ಯೋಜನೆ ಕಳೆದ ಎರಡು ದಶಕಗಳಿಂದ ಸರಾಗವಾಗಿ ಮುಂದುವರಿದುಕೊಂಡು ಬಂದಿದೆ.

ಈ ಮಹತ್ವದ ಯೋಜನೆಯನ್ನು ಕ್ರಮಬದ್ಧವಾಗಿ, ಅನುಷ್ಠನಗೊಳಿಸುವ ಇರಾದೆಯಿಂದ ಪ್ರತ್ಯೇಕವಾದ "ವ್ಯಾಸಂಗ ಸಹಾಯ ಯೋಜನಾ ಸಮಿತಿ"ಯೊಂದನ್ನು ರಚಿಸಲಾಗಿದ್ದು, ಪ್ರತ್ಯೇಕವಾದ ಬ್ಯಾಂಕ್ ಖಾತೆಯೊಂದನ್ನು ಕೂಡಾ ತೆರೆಯಲಾಗಿದೆ. 2013ರಲ್ಲಿ ನಡೆದ ಬಳಗದ ರಜತ ಮಹೋತ್ಸವ ಸಂದರ್ಭದಲ್ಲಿ ನಿರ್ದಿಷ್ಟ ಬೃಹತ್ ಪ್ರಮಾಣದ ಕೊಡುಗೆಯ ಆಧಾರದಲ್ಲಿ ಪ್ರತ್ಯೇಕವಾದ ಎಂಡೋಮೆಂಟ್‌ನ್ನು ಕೂಡಾ ಸೃಷ್ಟಿಸಲಾಗಿದೆ.

ವ್ಯಾಸಂಗ ಸಹಾಯ ಯೋಜನೆಯ ಪ್ರಮುಖ ಅಂಶಗಳು :

- ಪಿಯುಸಿ/ಪ್ಲಸ್ ಟು ಪಾಸಾಗಿರುವ ಪ್ರತಿಭಾವಂತ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ.
- ವೃತ್ತಿಪರ/ವೊಕೇಶನಲ್ ಉನ್ನತ ವ್ಯಾಸಂಗಕ್ಕಾಗಿ ಆರ್ಥಿಕ ಸಹಾಯ.
- ಪ್ರತಿ ವಿದ್ಯಾರ್ಥಿಗೆ ಅಗತ್ಯನುಗುಣವಾಗಿ ರೂ.20,000 ದಿಂದ ರೂ.30,000 ದವರೆಗೆ ಸಹಾಯ.
- ಕೋರ್ಸ್ ಮುಗಿಯುವವರೆಗೆ ಪ್ರತಿ ವರ್ಷವೂ ಸಹಾಯ ನೀಡಿಕೆ.
- ಬಡ್ಡಿರಹಿತವಾದ ಈ ಸಹಾಯವನ್ನು ವಿದ್ಯಾರ್ಥಿಯು ತನಗೆ ಉದ್ಯೋಗ ಲಭಿಸಿದ ನಂತರ ಬಳಗಕ್ಕೆ ಹಿಂದಿರಿಗಿಸುವ ಷರತ್ತು.
- ಕನಿಷ್ಠ ಡಾಕ್ಯುಮೆಂಟೇಶನ್ – ಕೇವಲ ಬಳಗದಿಂದ ಶಿಫಾರಸು ಹಾಗೂ ಪಡೆದ ಸಹಾಯವನ್ನು ಹಿಂದಿರುಗಿಸುವ ಬಗ್ಗೆ ಹೆತ್ತವರು/ಪೋಷಕರಿಂದ ಕರಾರು ಪತ್ರ.

ಬಳಗದ ಅನೇಕ ಉದಾರಿಗಳ ದೇಣಿಗೆಯಿಂದ ಯಶಸ್ವಿಯಾಗಿ ಕಾರ್ಯಗತವಾಗುತ್ತಿರುವ ಈ ಯೋಜನೆಯ ಆರಂಭದಿಂದ ಇದುವರೆಗಿನ ಪ್ರಗತಿಯ ವಿವರ :

| ಕ್ರ.ಸಂ. | ವಿವರ | ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ |
|---|---|---|---|
| 1. | ಆರ್ಥಿಕ ಸಹಾಯ ಪಡೆದವರು | 56 | ರೂ.44.10 ಲಕ್ಷ |
| 2. | ವ್ಯಾಸಂಗ ಮುಕ್ತಾಯಗೊಳಿಸಿರುವವರು | 49 | ರೂ.37.20 ಲಕ್ಷ |
| 3. | ಸಹಾಯವನ್ನು ಹಿಂದಿರುಗಿಸಿದವರು | 36 | ರೂ.22.90 ಲಕ್ಷ |
| 4. | ಪ್ರಗತಿಯಲ್ಲಿರುವ ವಾಪಾಸಾತಿ | 13 | ರೂ.10.52 ಲಕ್ಷ |
| 5. | ವ್ಯಾಸಂಗ ಪ್ರಗತಿಯಲ್ಲಿರುವವರು | 7 | ರೂ.6.90 ಲಕ್ಷ |
| 6. | ಬಾಕಿ ಇರುವ ಒಟ್ಟು ಸಹಾಯ ಮೊತ್ತ | – | ರೂ.17.42 ಲಕ್ಷ |


ಆರ್ಥಿಕ ಸಹಾಯ ಪಡೆದ ವಿದ್ಯಾರ್ಥಿಗಳಲ್ಲಿ 50 ಜನ ಇಂಜಿನಿಯರಿಂಗ್, 3–ಮೆಡಿಕಲ್, 1–ಕಂಪ್ಯೂಟರ್ ಸಯನ್ಸ್‌ನಲ್ಲಿ ಡಿಪ್ಲೊಮೊ, 1–ಬಿ.ಸಿ.ಎ. ಮತ್ತು 1–ಚಾರ್ಟಡ್ ಎಕೌಂಟೆನ್ಸಿ ವ್ಯಾಸಂಗಕ್ಕೆ ಸಹಾಯ ಪಡೆದಿರುತ್ತಾರೆ.

ಈ ವ್ಯಾಸಂಗ ಸಹಾಯ ಯೋಜನೆಯ ನಿಧಿಯನ್ನು ವೃದ್ಧಿಸಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ನೆರವನ್ನು ನೀಡುವುದು ಬಳಗದ ಸದಾಶಯ. ಇದಕ್ಕಾಗಿ ಸದಸ್ಯ ಮಹನೀಯರು ಉದಾರ ದೇಣಿಗೆಯನ್ನು ನೀಡುವುದರೊಂದಿಗೆ ಮತ್ತಷ್ಟು ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಬದುಕನ್ನು ರೂಪಿಸಿಕೊಳ್ಳಲು ನೆರವಾಗಬೇಕೆಂದು ವಿನಮ್ರ ಕೋರಿಕೆ.

– **ಎಸ್.ಎನ್. ಶರತ್‌ಚಂದ್ರ,** ಸಂಚಾಲಕರು
ವ್ಯಾಸಂಗ ಸಹಾಯ ಯೋಜನೆ (9886040271)

# ಫುಲ್ ಪೈಸಾ ವಸೂಲ್

– ಎಸ್.ಎನ್. ಪ್ರಶಾಂತ್ ಚಂದ್ರ



**ನಿಮ್ಮ ಸಲಹೆಯಿಂದ ನಮ್ಮ ಮನೆಗೆ ಲಕ್ಷ್ಮಿ ಬಂದಿದ್ದಾಳೆ ಎಂದು, ಒಂದು ಲಕ್ಷ್ಮೀದೇವಿಯ ಫೋಟೊ ಉಡುಗೊರೆ ಕೊಟ್ರು. ತುಂಬಾ ಸಂತೋಷದಿಂದ ಹಿಂದಿರುಗಿದ್ರು, ನನಗೆ ಒಂದುಕಡೆ ಸಮಾಧಾನ, ಕೇಸ್ ಹಾಕದಿದ್ರೂ, ಫುಲ್ ಪೈಸಾ ವಸೂಲ್.**

ಸುಮಾರು 30 ವರ್ಷಗಳ ಹಿಂದಿನ ಘಟನೆ; ವಕೀಲ ವೃತ್ತಿ ಪ್ರಾರಂಭಿಸಿದ ಹೊಸತರಲ್ಲಿ, ನಾನು ಕಲಾಪಗಳನ್ನು ಮುಗಿಸಿ ನ್ಯಾಯಾಲಯದಿಂದ ಹೊರಗೆ ಬರುತ್ತಿದ್ದೆ; ನನಗೆ ಗೊತ್ತಿರುವ ನ್ಯಾಯಾಲಯದ ಒಬ್ಬ ಸಿಬ್ಬಂದಿ ನನ್ನನ್ನು ನಿಲ್ಲಿಸಿ ಮಾತನಾಡಿಸಿದರು; ಉಭಯ ಕುಶಲೋಪರಿಯ ನಂತರ, ಅವರಲ್ಲಿ ಯಾವುದೋ ಒಂದು ವಿಚಾರದ ಬಗ್ಗೆ ಮನಸ್ಸಿನಲ್ಲಿ ಕಿರಿಕಿರಿ ಇದೆ ಎನಿಸಿತು; ವಿಚಾರಿಸಿದಾಗ, ತನ್ನ ಆತಂಕವನ್ನು ಅವರು ಹೊರ ಹಾಕಿದರು; ಅವರ ನಿಕಟ ಸಂಬಂಧಿಕರಿಗೆ ಒಂದು ಕಾನೂನು ಸಮಸ್ಯೆ ಉಂಟಾಗಿದೆ. ಅದರ, ಪರಿಹಾರ ಸಾಧ್ಯವೇ ಎಂದು ಪೂರ್ತಿ ಮಾಹಿತಿಯನ್ನು ನನ್ನ ಮುಂದಿಟ್ಟರು. ಅವರ ವಿಶ್ಲೇಷಣೆಯಿಂದ, ಅವರ ಸಂಬಂಧಿಯ ಸಂಕಷ್ಟಕ್ಕೆ ಕಾನೂನಿನಲ್ಲಿ ಪರಿಹಾರವೇ ಇಲ್ಲ ಎಂದೆನಿಸಿತು. ಆದರೂ ಸಮಾಧಾನಿಸಿ, ಅವರ ಸಂಬಂಧಿಯನ್ನು ತನ್ನ ಕಛೇರಿಗೆ ಕಳುಹಿಸಿ ಎಂದು ಹೇಳಿ ಹೊರಟೆ.

ಅಂತೆಯೇ, ಅದೇ ಸಂಜೆ ಅವರ ಸಂಬಂಧಿ ಮತ್ತು ಪತ್ನಿ ನನ್ನ ಕಛೇರಿಗೆ ಬಂದರು; ಕೆಲವು ವರ್ಷಗಳ ಹಿಂದೆ; ಅವರ ಸಹೋದ್ಯೋಗಿ ವಾಹನ ಖರೀದಿಸಲು, ಇವರಿಂದ ಲಕ್ಷಗಟ್ಟಲೆ ನಗದು ಹಣ ತುರ್ತಾಗಿ ಪಡೆದಿದ್ದು, ಶೀಘ್ರದಲ್ಲೇ ಹಿಂದಿರುಗಿಸುವುದಾಗಿ ಭರವಸೆ ಕೊಟ್ಟಿದ್ದರೂ ಸಹ, ಎಷ್ಟು ಗೋಗರೆದಿದ್ದರೂ ಹಿಂದಿರುಗಿಸಿರಲಿಲ್ಲ. ಅವರ ಆರ್ಥಿಕ ಸ್ಥಿತಿಗತಿಗಳನ್ನು ಅರಿತಿದ್ದ ಇವರು ಗೆಳೆಯನಿಗೆ ಸಹಾಯ ಹಸ್ತ ನೀಡುವ ಉದ್ದೇಶದಿಂದ, ತಮ್ಮ ಕೈಮೀರಿ, ತಮ್ಮಲ್ಲಿದ್ದ ಎಲ್ಲಾ ಉಳಿತಾಯವನ್ನು ಸೇರಿಸಿ, ಗೆಳೆಯನಿಗೆ ಸಹಾಯ ಮಾಡಿದ್ದರು; ಮಾತುಕೊಟ್ಟಂತೆ ಹಣವನ್ನು ಆರು ತಿಂಗಳ ಒಳಗೆ ಹಿಂದಿರುಗಿಸಬೇಕಿತ್ತು; ಸುಮಾರು ದಿವಸ ಆತ ಇವರಿಂದ ಕಣ್ಮರೆಸಿಕೊಂಡು ಓಡಾಡುತ್ತಿದ್ದ; ಇವತ್ತು ಬರಬಹುದು, ನಾಳೆ ಬರಬಹುದು ಎಂದು ಕಾದು ಕಾದು ಕೊನೆಗೆ ವಿಧಿಯಿಲ್ಲದೇ ಒಂದು ದಿನ ಕೇಳಿಯೇ ಬಿಟ್ರು; ಆಗ ಆತ, ನಾನು ನಿಮ್ಮಿಂದ ಹಣವನ್ನೇ ಪಡೆದಿಲ್ಲ, ಏನು ಬೇಕಾದ್ರು ಮಾಡ್ಕೊಳಿ ಎಂದನಂತೆ, ಮತ್ತೆ ಮತ್ತೆ ಹೋಗಿ ಗೋಗರೆದುಕೊಂಡರೂ ಪ್ರಯೋಜನವಾಗಲಿಲ್ಲ. ಪೋಲೀಸ್ ಠಾಣೆಗೆ ಹೋದ್ರೆ ಇವರಿಗೇ ಬೈದು ಹಿಂದೆ ಕಳುಹಿಸಿದ್ರಂತೆ.

ಪೂರ್ತಿಯಾಗಿ ಆಲಿಸಿದ ನಂತರ ವಕೀಲನಂತೆ ಪ್ರಶ್ನೆಗಳ ಸುರಿಮಳೆಗರೆದೆ; ಪ್ರೊಮಿಸ್ಸರಿ ನೋಟ್ ಇದೆಯಾ? ಚೆಕ್ ಕೊಟ್ಟಿದ್ರಾ? ಏನಾದರೂ ಪತ್ರ ವ್ಯವಹಾರ ದಾಖಲೆ? ವಗೈರೆ... ಎಲ್ಲದಕ್ಕೂ ನಕಾರ... ಮತ್ತೆ ಮಾಮೂಲಿ ಡೈಲಾಗ್!!! ಜಾಸ್ತಿ ಕೇಳಿದ್ರೆ, ಸರ್ ಅವೆಲ್ಲಾ ಇದ್ದಿದ್ರೆ ನಾವು ನಮ್ಮ ಹತ್ರ ಯಾಕೆ ಬರ್ತಿದ್ವಿ? ಹಾಗಾದ್ರೆ ಏನು ದಾರಿ ಇಲ್ಲವಾ ಅಂತ ಕೇಳಿದರು? ಪೇಚು ಮೋರೆ ಮಾಡಿಕೊಂಡು ಹೋದ್ರು.

ಮರುದಿನ ಮತ್ತೆ, ನ್ಯಾಯಾಲಯದ ಸಿಬ್ಬಂದಿ ನನ್ನನ್ನು ಭೇಟಿ ಮಾಡಿ, ನನಗೆ ಸುಮಾರು ವಕೀಲರು ಗೊತ್ತು, ಆದರೆ ಅವರೆಲ್ಲರನ್ನೂ ಬಿಟ್ಟು ನಿಮ್ಮ ಹತ್ರ ಯಾಕೆ ಕಳುಹಿಸಿದೆ ಹೇಳಿ? ಎಂದು ನನಗೆ ಕ್ಲಾಸ್ ತಗೊಂಡ್ರು, ನನ್ನನ್ನು ಸ್ವಲ್ಪ ಹೊಗಳಿ, ನೀವು ಯುವಕರಾಗಿ ವೃತ್ತಿಯಲ್ಲಿ ಮುಂದೆ ಬರಬೇಕೆಂದಿದ್ರೆ ಇನ್ನೋವೇಟಿವ್ ಆಗಬೇಕು ಎಂದೆಲ್ಲ ಬುದ್ಧಿವಾದ ಹೇಳಿದರು, ಒಂದು ಕಡೆ ಪುಕ್ಕಟೆ ಕಕ್ಷೀದಾರ, ಇನ್ನೊಂದೆಡೆ ಇವರ ಪುಕ್ಕಟೆ ಅಡ್ವೈಸು; ದಂಪತಿಗಳು ಮತ್ತೆರಡು ಬಾರಿ ಬಂದು ಹೋದರು, ಮತ್ತದೇ ಕಥೆ, ಮತ್ತದೇ ಡೈಲಾಗ್. ಒಂದು ಕಡೆ ಆ ಸಿಬ್ಬಂದಿ ನನ್ನ ಮೇಲೆ ಇಟ್ಟ ವಿಶ್ವಾಸ, ಮತ್ತೊಂದೆಡೆ ನನ್ನ ಕಕ್ಷೀದಾರರ ಅಸಹಾಯಕತೆ; ಏನ್ ಸಾರ್, ಈಸ್ ಜಸ್ಟಿಸ್ ಬ್ಲೈಂಡ್? ಎನ್ನುವ ಡೈಲಾಗ್ ಕೇಳಿ ಕೇಳಿ ಸಾಕಾಯ್ತು; ನನಗ್ಯಾಕೆ ಅವರ ಸಂಕಟ ಇನ್ನೂ ಅರ್ಥ ಆಗ್ತಿಲ್ಲ, ಇಷ್ಟು, ಕ್ಲಿಯರ್ ಇದ್ರು, ಕೇಸ್ ಹಾಕಲು ನನಗ್ಯಾಕೆ ಹಿಂಜರಿಕೆ, ಅನ್ನೋ ಸಂಶಯ ಅವರಿಗೆ, ಈ ಗಲಾಟೆ ಒಳಗೆ ಲಿಮಿಟೇಶನ್ ಆಗಿ ಹೋಗಿದೆ ಎನ್ನುವ ದೊಡ್ಡ ಅನುಮಾನ ನನಗೆ, ಆದರೆ ಅವರ ಬಳಿ ಪ್ರಸ್ತಾಪ ಮಾಡಲು ನನಗೆ ಧೈರ್ಯವೇ ಇರಲಿಲ್ಲ; ವಕೀಲನಾಗಿ ಈ ಗತಿ ಎದುರಿಸೋ ಬದಲು, ಯಾವುದಾದ್ರೂ ಸರ್ಕಾರಿ ನೌಕರನಾಗಿದ್ದಿದ್ದರೆ, ತಿಂಗಳು-ತಿಂಗಳು ಸಂಬಳ, ತಗೊಂಡು ಆರಾಮವಾಗಿ

ಇರಬಹುದಿತ್ತು ಅನ್ನೋ ಭಾವನೆ ನನಗೆ!

ಕಛೇರಿಯಲ್ಲಿ ಒಂದು ದಿನ ಇದೇ ರೀತಿ ಕೂತಿದ್ದಾಗ, ಆ ಸಿಬ್ಬಂದಿ ಫೋನ್ ಮಾಡಿ 'ಮತ್ತೆ ಅವರನ್ನು ಕಳುಹಿಸ್ತಾ ಇದ್ದೀನಿ ಏನಾದ್ರು ಒಂದು ಫೈನಲ್ಲಾಗಿ ಅಡ್ವೈಸ್ ಮಾಡಿ ಸರ್ ಅಂದ್ರು'; ಕಕ್ಷಿದಾರರು ಮತ್ತೆ ಪ್ರತ್ಯಕ್ಷ, ಮತ್ತದೇ ಪ್ರಶ್ನೆ, ಮತ್ತದೇ ಅಳುಮುಖ.

ಸುಮ್ನೆ ಅದೇ ವಿಷಯಗಳನ್ನು ಕೆದಕಿದೆ; ಯಾವುದಕ್ಕೂ ಸಕಾರಾತ್ಮಕ ಉತ್ತರ ಇಲ್ಲ', ನನಗೂ ಸಾಕಾಗಿ ಹೋಗಿತ್ತು. ಹೊರಗಡೆಯಿಂದ, ಫೀಸ್ ಕೊಡೊ ಹೊಸ ಕಕ್ಷಿದಾರ ಕಾಯ್ತಿದ್ದಾರೆ ಈ ಕಡೆ, ಇವರು ಕುರ್ಚಿಯಿಂದ ಎದ್ದೇಳ್ತಿಲ್ಲ; ಮಾತು ಬದಲಾಯಿಸಿದೆ. ಪೆರಿ ಮೇಸನ್ ನೆನಪಾಯ್ತು; ನಿಮ್ಮ ಗೆಳೆಯನ ಮನೆ ಎಲ್ಲಿ? ಏನು ಕೆಲಸ? ಎಷ್ಟು ಸಂಬಳ? ಮದುವೆಯಾಗಿದ್ದಾರಾ? ಮಕ್ಕಳೆಷ್ಟು? ಹೆಂಡ್ತಿ ಓದಿದ್ದಾರೆ? ಕೆಲಸದಲ್ಲಿದ್ದಾರಾ? ಹೆಂಡ್ತಿ, ತಂದೆ, ತಾಯಿ ಎಲ್ಲಿದ್ದಾರೆ? ಎಲ್ಲಾದಕ್ಕೂ ಪ್ರಾಂಪ್ಟ್ ಉತ್ತರ. ನನ್ನಿಂದ ಏನಾದ್ರು ಮಿರಾಕಲ್ ಆಗುತ್ತಾ ಅನ್ನುವ ರೀತಿ ಅವರಿಬ್ಬರಲ್ಲಿ ಉತ್ಸುಕತೆ; ಕೊನೆಗೆ, ಏನೂ ತೋಚದೆ ಬಹಳ ಯೋಚಿಸಿದಂತೆ ಮಾಡಿ, ಆತನ ಹೆಂಡ್ತಿ ತಾಯಿ, ತಂದೆ ನಿಮಗೆ ಗೊತ್ತಾ? ಅವರ ಹತ್ರ ಯಾವಾಗಲಾದ್ರು ಮಾತಾಡಿದ್ದೀರಾ? ಯಾಕೆ ಅವರನ್ನು ಒಮ್ಮೆ ಕೇಳಬಾರದು, ಈ ವಿಚಾರದ ಬಗ್ಗೆ? ತಂದೆ-ತಾಯಿ ನಮ್ಮನ್ನು ಹೊರಗೆ ಹಾಕಿದ್ರೆ ಏನ್ ಮಾಡೋದು ಅನ್ನೋ ಭಯ ಅವರಿಗೆ; ಒಟ್ಟಿನಲ್ಲಿ, ಇವರನ್ನು ಹೇಗಾದ್ರು ಮಾಡಿ ಕಛೇರಿಯಿಂದ ಹೊರಹಾಕುವ ಪ್ರಯತ್ನ, ನನ್ನದು. ಹೋಗಿ, ಪ್ರಯತ್ನಿಸಿ ತಪ್ಪೇನಿಲ್ಲ ಎಂದು ಹುರಿದುಂಬಿಸಿದೆ. ದುಡ್ಡು ಬರ್ಲಿಲ್ಲ ಅಂದ್ರೆ ಅಳಿಯನ ಮೇಲೆ ಕೇಸ್ ಹಾಕ್ತೀವಿ, ಅನ್ನಿ ಅಂದೆ.

ಸಾರ್, ನಾಳೇನೇ ಹೋಗಿ, ಆತನ ಅತ್ತೆ ಹತ್ತಿರ ಮಾತಾಡ್ತೀವಿ, ನೋಡ್ತೀವಿ ಎಂದು ಎದ್ದು ಹೋದರು! ನನ್ನಿಂದ ಬಹಳ ದೊಡ್ಡ ಕಾನೂನು ಸಲಹೆ ಪಡೆದೆ ಅನ್ನೋ ಸಂತೋಷ ಅವರಿಗೆ, ಆದರೆ, ನನ್ನ ಪಾಡು ಬೇರೆ, ಫೀಸೂ ಇಲ್ಲ, ಟೈಮೂ ವೇಸ್ಟ್.

ಎರಡು ವಾರದ ನಂತರ, ನ್ಯಾಯಾಲಯದ ಸಿಬ್ಬಂದಿ, ಸಂಬಂಧಿ ಮತ್ತು ಪತ್ನಿ ಎಲ್ಲಾ ನನ್ನ ಕಛೇರಿಯಲ್ಲಿ ಬೆಳ್ಳಂಬೆಳಗ್ಗೆ ಹಾಜರು; ನಾನು ಒಳಗೆ ಬರುತ್ತಿದ್ದಂತೆ, ಎದ್ದು ನಿಂತು, ನನ್ನ ಕೊಠಡಿಗೆ, ನನ್ನನ್ನೇ ಸ್ವಾಗತಿಸಿದರು. ಭಾರತ ತಂಡ ಕ್ರಿಕೆಟ್ನಲ್ಲಿ ವಿಶ್ವ ಕಪ್ ಗೆದ್ದಿದೆ ಅನ್ನೋ ಅಷ್ಟು ಸಂತೋಷ ಅವರ ಮುಖದಲ್ಲಿ. ಬಂತು ಸಾರ್, ಎಲ್ಲಾ ದುಡ್ಡು ಹಿಂದೆ ಬಂತು, ಥ್ಯಾಂಕ್ಸ್, ಅಂದ್ರು; ನನಗೆ ಆಶ್ಚರ್ಯ!!!

ಆತನ ಅತ್ತೆ ಬಳಿ ಹೋಗಿ ತಮ್ಮ ಅಳಲನ್ನು ತೋಡಿಕೊಂಡ್ರಂತೆ; ಅತ್ತೆ ಬಹಳ ತೂಕದ ವ್ಯಕ್ತಿ, ಕೈ ಪೂರ್ತಿ ಚಿನ್ನದ ಬಳೆ, ದೊಡ್ಡ ಮನೆ, ಫುಲ್ಲು ಆಳು, ಕಾರು, ಮೊದಲಿಗೆ ಇವರ ಹೇಳಿಕೆ ಅವರು ನಂಬಲಿಲ್ಲವಂತೆ; ಆಮೇಲೆ ಪೂರ್ತಿಯಾಗಿ ಆಲಿಸಿದ ನಂತರ, ಯಾರಿಗೋ ಕಾಲ್ ಮಾಡಿ, ಸ್ವಲ್ಪ ಯೋಚನೆ ಮಾಡಿ, ಇವರಲ್ಲಿ ಐದು ದಿನಗಳ ಗಡುವು ಕೇಳಿದರಂತೆ. ಮತ್ತೆ ಹೋದಾಗ, ಆಕೆ ಚೆನ್ನಾಗಿ ಮಾತಾಡ್ಸಿ ಕಾಫಿ ಕೊಟ್ಟು, ಪೂರ್ತಿ ನಗದುಹಣ, ಬಡ್ಡಿ ಸಮೇತ ಹಿಂದೆ ಕೊಟ್ಟು ಅಳಿಯನ ವರ್ತನೆಗೆ, ಸಾರಿ ಕೇಳಿದ್ರಂತೆ, ಈ ಕಲಿಯುಗದಲ್ಲಿ, ಇಂಥಹ ಒಳ್ಳೆಯ ಜನ ಇನ್ನೂ ಇದ್ದಾರೆ ಅನ್ನೋ ಖುಷಿ ಇವರಿಗೆ.

ನನ್ನ ಐಡಿಯಾನ ಹೊಗಳಿದ್ರು, ಅದಕ್ಕೆ ಸಾರ್ ನಿಮ್ಹತ್ರ ಬಂದಿದ್ದು, ಎಂದರು. ನನ್ನ ಕಕ್ಷೀದಾರರಿಗೆ ನೆಮ್ಮದಿ ಸಿಕ್ತು, ಬಹಳ ಮುಖ್ಯವಾಗಿ ನ್ಯಾಯಾಲಯದ ಸಿಬ್ಬಂದಿಯ ಕಣ್ಣೆದುರು ನಾನೊಬ್ಬ ಕ್ರಿಯಾತ್ಮಕ ವಕೀಲ! ನನ್ನ ಫೀಸ್ ಎಷ್ಟು ಎಂದು ಕೇಳಿದ್ರು, ಹೇಳೋ ಧೈರ್ಯ ನನಗಿರಲಿಲ್ಲ. ನಿಮ್ಮ ಸಲಹೆಯಿಂದ ನಮ್ಮ ಮನೆಗೆ ಲಕ್ಷ್ಮಿ ಬಂದಿದ್ದಾಳೆ ಎಂದು, ಒಂದು ಲಕ್ಷ್ಮೀದೇವಿಯ ಫೋಟೊ ಉಡುಗೊರೆ ಕೊಟ್ರು. ತುಂಬಾ ಸಂತೋಷದಿಂದ ಹಿಂದಿರುಗಿದ್ರು, ನನಗೆ ಒಂದುಕಡೆ ಸಮಾಧಾನ, ಕೇಸ್ ಹಾಕದಿದ್ರೂ, ಫುಲ್ ಪೈಸಾ ವಸೂಲ್. ನನ್ನದಾಗಲೀ, ಕಾನೂನಿನ ಪಾತ್ರವಾಗಲಿ ಏನೂ ಇರಲಿಲ್ಲ, ಆದ್ರೆ ಇನ್ನೊಂದೆಡೆ ಅಸಮಾಧಾನ, ನಿಮಗೂ ಗೊತ್ತಾಗಿರಬೇಕು ಯಾಕೆ ಅಂತ!!!

ಇದೆಲ್ಲವನ್ನೂ ಚಾಚೂತಪ್ಪದೇ ಗಮನಿಸುತ್ತಿದ್ದ ನನ್ನ ಸಹೋದ್ಯೋಗಿ ಆನಂದ ತೀರ್ಥ, ಏನ್ ಸಾರ್, ಬಹಳ ಖುಷಿಯಾಗಿದ್ದೀರಾ? ಎಂದ; ಪೂರ್ತಿಯಾಗಿ ವಿವರಿಸಿದೆ; ಅವನಿಗೂ ಆಶ್ಚರ್ಯ. ಯಾರಿಗೂ ಬಗ್ಗದ ಆ ಪುಣ್ಯಾತ್ಮ ಅತ್ತೆಯ ಮಾತಿಗೆ ಇಷ್ಟು ಬೇಗ ಒಪ್ಪಿದ್ನೇ?

ಇದು ಇಂದಿಗೂ ಅರ್ಥವಾಗದ ಕಗ್ಗಂಟು!!!!

ನಾನು ಹೇಳಿದೆ

'When no Law works,
Mother-in-law works'!!!

ಅದಿರಲಿ, ಇದೂ ಒಂದು ರೀತಿ ಎಡಿಆರ್ ಅಲ್ವೆ? ನೀವೇ ಹೇಳಿ!!!

# ನಾನು, ನಾನು ಮತ್ತು ನಾನು !

**ಏನನ್ನಾದರೂ ಬಿಡಬಹುದು ಆದರೆ ನಾನು ಅನ್ನೋ ಶಬ್ದ ಬಿಡೋದು ಘಟ ಬಿದ್ದಾಗ ಮಾತ್ರ ಸಾಧ್ಯ**

ನಾನು ಎಂಬುದು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರುವಂಥಹದ್ದು. ನಾನೂ ಇದಕ್ಕೆ ಹೊರತಾಗಿಲ್ಲ ಯಾರಾದರೂ ನನ್ನನ್ನು ಹೊಗಳಿದರೆ ತಕ್ಷಣವೇ ಪುಳಕಗೊಳ್ಳುತ್ತೇನೆ. ಆದರೆ ಹೊರ ಪ್ರಪಂಚಕ್ಕೆ ತೋರ್ಪಡಿಸದಂತಿರುವ ಕಲೆ ಸಿದ್ಧಿಸಿಕೊಂಡಿದ್ದೇನೆ.

ಹೀಗೆಯೇ ಕೆಲ ವರ್ಷಗಳ ಹಿಂದೆ ಬೇಸರವಾಗಿ ಹಾಗೆಯೇ ಬೇಸರ ಕಳೆಯಲೆಂದು ರಾಜ್ಯ ಪರ್ಯಟನೆಗೆ ಹೊರಟೆ. ಸುಮಾರು ದಿನಗಳ ಪಯಣದ ನಂತರ ಶಿವಮೊಗ್ಗ ತಲುಪಿದೆ, ಅಲ್ಲಿ ಶಿವಪ್ಪ ನಾಯಕ ಮ್ಯೂಸಿಯಂ ಸಂದರ್ಶಿಸಿದೆ.

ಅಲ್ಲಿ ಕಲಾವಿದನೊಬ್ಬನ ಪರಿಚಯವಾಯಿತು. ಆತ ನಿಜಕ್ಕೂ ಬಹಳ ಅದ್ಭುತ ಶಿಲ್ಪಿ. ಅಲ್ಲಿ ಆತನೇ ಕೆತ್ತಿದ ಅನೇಕ ಮೂರ್ತಿಗಳು ಅಲ್ಲಿ ಅನಾವರಣಗೊಂಡಿದ್ದವು. ಆ ಮೂರ್ತಿಗಳು ಅದೆಷ್ಟು ಮನಮೋಹಕವಾಗಿದ್ದವೆಂದರೆ ಅವು ನಿಜವಾಗಿಯೂ ಜೀವತಳೆದು ನಿಂತಿವೆಯೇನೋ ಎಂಬಷ್ಟು !

ನನಗೆ ನಂಬಲು ಸಾಧ್ಯವಾಗದೆ ಆಶ್ಚರ್ಯವಾಗಿ ಆತನನ್ನು ಪ್ರಶ್ನಿಸಿದೆ.

'ನಿಜವಾಗಿಯೂ ಈ ಮೂರ್ತಿಗಳನ್ನು ಕೆತ್ತಿದವರು ನೀವೇನಾ?!!'

ಆತ : 'ಹೌದು ಸಾರ್ ನಾನೇ'

ನನಗೆ ಸಮಾಧಾನವಾಗಲಿಲ್ಲ

'ನಿಜವಾಗಿಯೂ ನೀವೇ ಕೆತ್ತಿದ ಶಿಲ್ಪಗಳೇ ಇವು?'

'ಹೌದು ಸಾರ್ ನಾನೇ'

ಊಹೂಂ... ನನಗೆ ಸಾಕಾಗಲಿಲ್ಲ

'ನಿಜವಾಗಿಯೂ?!!'

'ಹೌದು ಸಾರ್ ನಾನೇ' ಎಂದು ಕೈ ಎತ್ತಿದ.

ಆಗ ನನ್ನ ಗಮನ ಆತನ ಹಸ್ತದತ್ತ ಸೆಳೆಯಿತು,

'ಎಲ್ಲಿ ನಿಮ್ಮ ಹಸ್ತ ತೋರಿಸಿ'

'ಯಾಕೆ ಸಾರ್ ಭವಿಷ್ಯ ಹೇಳ್ತೀರಾ? ನೀವು ಜ್ಯೋತೀಷಿಗಳಾ?' ಕೈ ಮುಂದೆ ಚಾಚಿದ.

'ಅಯ್ಯೋ ಹಾಗೇನೂ ಇಲ್ಲಾಪ ಹಾಗೇ ಕಲಿತಿದ್ದೇನೆ' ಆತನ ಹಸ್ತ ಪರಿಶೀಲಿಸಿದೆ.

'ನೋಡಿ ನಿಮ್ಮಲ್ಲಿ ಅತೀ ಅದ್ಭುತವಾದ ಪ್ರತಿಭೆ ಇದೆ ಆದರೆ...'

'ಆದರೆ ಏನು ಮುಂದೆ ಹೇಳಿ ಸಾರ್'

'ಬೇಡ ಬಿಡಿ ನಾನಿನ್ನು ಬರಲೇ' ಹೊರಡಲನುವಾದೆ.

'ಅಯ್ಯೋ ಮುಂದೆ ಹೇಳಿ ಸಾರ್ ಪ್ಲೀಸ್'

'ನೋಡಿ ನಿಮ್ಮ ವಿಷಯದಲ್ಲಿ ಮುಂದೆ ಏನಾಗುವುದೋ ಅದನ್ನು ಈಗಲೇ ತಿಳಿದುಕೊಳ್ಳುವುದು ಅಷ್ಟು ಸಮಂಜಸವೆನಿಸುತ್ತಿಲ್ಲ, ಏನಾಗುವುದೋ ಅದು ಆಗಿಯೇ ತೀರುತ್ತದೆ ಹಾಗಾಗಿ ತಾವು ಅದನ್ನು ತಿಳಿದುಕೊಳ್ಳದಿರುವುದೇ ಲೇಸು.'

ನನ್ನ ಮಾತು ಆತನಿಗೆ ಕುತೂಹಲದ ಸರಕಾಯಿತು.

'ಸಾರ್ ಅದೇನೇ ಆಗಿರಲಿ ನನ್ನ ಸಾವಿನ ವಿಷಯವೇ ಆಗಿರಲಿ, ನನಗೆ ನಾಳೆಯೇ ಸಾವು ಬರಲಿ ನಾನು ಚಿಂತಿಸುವುದಿಲ್ಲ ನೀವು ಹೇಳಿ' ದುಂಬಾಲು ಬಿದ್ದ.

'ಹೌದು ನಿನಗೆ ನಾಳೆ ಮಧ್ಯಾಹ್ನ 12:30 ಘಂಟೆಗೆ ಸಾವು ಬರುತ್ತದೆ'

ನಿಜಕ್ಕೂ ಆತನ ಜಂಘಾಬಲವೇ ಉಡುಗಿ ಹೋಯಿತು. ಒಂದು ಕ್ಷಣ ಅಲ್ಲಿಯೇ ಗರಬಡಿದವನಂತೆ ಕುಳಿತ.

'ಗೆಳೆಯಾ ನಾನು ಹೇಳಿರಲಿಲ್ಲವೇ ನನ್ನನ್ನು ಒತ್ತಾಯಪಡಿಸಿದೆ ಏಕೆ?'

'ಅಯ್ಯೋ ಇದಕ್ಕೇನಾದರೂ ಪರಿಹಾರವಿಲ್ಲವೇ'

'ಊಹೂಂ ಸಾವಿನಿಂದ ತಪ್ಪಿಸಿಕೊಳ್ಳಲು ಮನುಷ್ಯಮಾತ್ರದವರಿಗ್ಯಾರಿಗೂ ಸಾಧ್ಯವಿಲ್ಲ'

'ಏನಾದರೊಂದು ಪರಿಹಾರ ಸೂಚಿಸಿ ಗುರುಗಳೇ' ದುಂಬಾಲು ಬಿದ್ದ.

ನನಗೆ ಆತನ ಸಂಕಟ ಅರ್ಥವಾಯಿತು. ಆತನನ್ನು ಸಮಾಧಾನಪಡಿಸುವ ಪರ್ಯಾಯ ಮಾರ್ಗ ಆಲೋಚಿಸಿದೆ.

'ಊಂ ಒಂದು ಮಾರ್ಗವಿದೆ'

ಆತನ ಸಂತೋಷಕ್ಕೆ ಪಾರವೇ ಇರಲಿಲ್ಲ.

'ಬೇಗ ಹೇಳಿ ಗುರೂಜಿ'

'ನಿನ್ನಲ್ಲಿ ಮನುಷ್ಯರ ಮೂರ್ತಿಗಳನ್ನು ಕೆತ್ತುವ ಅದ್ಭುತವಾದ ಕಲೆಯಿದೆ, ನೀನು ನಿನ್ನ ಹಾಗೆಯೇ ಇರುವ ಒಂಭತ್ತು ಮೂರ್ತಿಗಳನ್ನು ಕೆತ್ತಿ ಸಾಲಾಗಿ ನಿಲ್ಲಿಸಿ ಮಧ್ಯೆ ನೀನೂ ನಿಲ್ಲಬೇಕು. ನಾಳೆ ಹನ್ನೆರಡೂವರೆ ಘಂಟೆಗೆ ಯಮ ಬರುತ್ತಾನೆ ನೀನು ಸ್ವಲ್ಪವೂ ಮಿಸುಕ ಬಾರದು, ನೆನಪಿರಲಿ ಮಿಸುಕಿದರೆ ನಿನಗೆ ಸಾವು.'

'ಆಯ್ತು ಗುರೂಜಿ' ಕಾಲಿಗೆ ಬಿದ್ದೆದ್ದು ಮೂರ್ತಿಕೆತ್ತನೆ ಶುರುವಿಟ್ಟುಕೊಂಡ.

ಸಾಯಂಕಾಲದ ಒಳಗಾಗಿ ಆತನಂತೆಯೇ ಇರುವ ಒಂಭತ್ತು ಮೂರ್ತಿಗಳು ಸಿದ್ಧಗೊಂಡವು! ಎಷ್ಟು ಅದ್ಭುತವಾದ ಶಿಲ್ಪಗಳೆಂದರೆ ಸೃಷ್ಟಿಕರ್ತ ಸಾಕ್ಷಾತ್ ಬ್ರಹ್ಮದೇವನೇ ಬಂದರೂ ಗುರುತು ಸಿಗಲಾರದಷ್ಟು!!

'ಸರಿ ಈಗ ಒಂದು ಘಂಟೆ ಮಿಸುಕಾಡದಂತೆ ನಿಲ್ಲುವುದನ್ನು ಅಭ್ಯಾಸ ಶುರುಮಾಡು'

ಕಠೋರವಾದ ಅಭ್ಯಾಸ ಶುರುವಾಯಿತು. ಆತ ಎಷ್ಟು ಚೆನ್ನಾಗಿ ಅಭ್ಯಸಿಸಿದನೆಂದರೆ ಅಕಸ್ಮಾತ್ ಆತನು ಕೆತ್ತಿದ ಮೂರ್ತಿಗಳಾದರೂ ಮಿಸುಕಬಹುದೇನೋ ಆದರೆ ಈತನು ಮಿಸುಕುತ್ತಿರಲಿಲ್ಲ. ಸಾವನ್ನು ಗೆಲ್ಲಬೇಕಲ್ಲ?

ಮರುದಿನ ಮಧ್ಯಾಹ್ನ. ಸಮಯ 12:30.

ಯಮ ಸರಿಯಾಗಿ ಹಾಜರಾಗುತ್ತಾನೆ. ಆತನಿಗೆ ಆಶ್ಚರ್ಯ! ಅಲ್ಲಿ ಈತನಂತೆಯೇ ಹತ್ತು ಜನರಿದ್ದಾರೆ!!

ಆತನ ಇತಿಹಾಸವನ್ನು ಕೆದಕಿದ ಯಮನಿಗೆ ನಿಧಾನವಾಗಿ ಪರಿಸ್ಥಿತಿಯ ಅರಿವಾಯಿತು. ಈ ಹಿಂದೆ ಇವೆಲ್ಲವುಗಳ ಅನುಭವವಿದ್ದ ಯಮ ನಸುನಗುತ್ತ ಉದ್ಗರಿಸಿದ.

'ವಾಹ್ ಭಲೇ... ಅದ್ಭುತ! ಸುಂದರ, ಅತೀ ಸುಂದರ ಇಂತಹ ಅತ್ಯಂತ ಮನಮೋಹಕವಾದ ಶಿಲ್ಪಗಳನ್ನು ಕತ್ತಿದಂಥಹ ಶಿಲ್ಪಿಯಾದರೂ ಯಾರು?!!'

ಆ ಓಂಭತ್ತು ಮೂರ್ತಿಗಳ ಮಧ್ಯೆ ಉಸಿರಾಡದೆ ನಿಂತಿದ್ದ ಶಿಲ್ಪಿ ಕೈ ಎತ್ತಿಹೇಳಿದ

'ನಾನು'....

– (ಕೃಪೆ : ವಾಟ್ಸಾಪ್)

## ನಿಮಗೆ ಎಷ್ಟು ಕಾರ ತಿಳಿದಿದೆ??

ಮೊದಲ ಪಾಠ : ಓಂಕಾರ
ಗೌರವಿಸೋ ಕಾರ : ಸಂಸ್ಕಾರ

ಪ್ರೇಮದ ಕಾರ : ಮಮಕಾರ
ಒಬ್ಬರನ್ನೊಬ್ಬರು ಸಂಧಿಸಿದಾಗ : ನಮಸ್ಕಾರ

ಪದವಿಯಿಂದ ಬರುವುದು : ಅಧಿಕಾರ
ಪದವಿ ಇಲ್ಲದೇ ಚಲಾಯಿಸುವುದು : ಅನಧಿಕಾರ

ಭಯದಿಂದ ಮಾಡುವುದು : ಅಹಂಕಾರ
ಆದರಿಸುವ ಕಾರ : ಪುರಸ್ಕಾರ

ಎದುರಿಸುವುದು : ದಿಕ್ಕಾರ
ಮಾತು ಕೇಳದಿರುವುದು : ತಿರಸ್ಕಾರ

ಲೆಕ್ಕದಲ್ಲಿ ಗುಣಿಸಿದರೆ : ಗುಣಾಕಾರ
ಲೆಕ್ಕದಲ್ಲಿ ಭಾಗಿಸಿದರೆ : ಬಾಗಾಕಾರ

ನುಡಿಯಲ್ಲಿ ಬರುವಿದು : ನುಡಿಕಾರ
ಗರ್ವದಿಂದ ಬರುವುದು : ಅಹಂಕಾರ

ಮಿತಿಮೀರಿದ ಗರ್ವ : ದುರಹಂಕಾರ
ಕಂಡುಹಿಡಿಯುವುದು : ಆವಿಷ್ಕಾರ

ಹುಡುಕಿದರೆ ಸಿಗುವುದು : ಪರಿಷ್ಕಾರ
ಹೆಂಗಸರು ಬಯಸುವುದು : ಅಲಂಕಾರ

ಒಳ್ಳೆಯದು ಮಾಡಿದರೆ : ಉಪಕಾರ
ಕೆಟ್ಟದ್ದು ಮಾಡಿದರೆ : ಅಪಕಾರ

ಶಿವನು ಬಯಸಬಹುದು : ಓಂಕಾರ
ವಿಷ್ಣುವಿನ ಕಾರ : ಶಾಂತಾಕಾರ

ಸೇಡಿನ ಕಾರ : ಪ್ರತೀಕಾರ
ಆದರಿಸುವುದು : ಸಂಸ್ಕಾರ

ಕರೋನ ಕೂಗು : ಭಯಂಕರ

ಮೇಲಿನದೆಲ್ಲಾ ಓದಿದ್ದೀರಿ ನಿಮಗೆ : ನಮಸ್ಕಾರ

– ಸಂಗ್ರಹ : ತಿ.ಸ. ನಾಗರಾಜ ಉಪಾಧ್ಯಾಯ

# ಬಳಗದ ಹೊಸ ಸದಸ್ಯರಿಗೆ ಸುಸ್ವಾಗತ

ಆನಂದ ಬಳಗದಲ್ಲಿ ಇದುವರೆಗೆ 2073 ಸದಸ್ಯರು ನೊಂದಣಿಯಾಗಿದ್ದು ಇದರ ವಿವರ ಹೀಗಿದೆ :


| | | |
|---|---|---|
| ಆಜೀವ ಸದಸ್ಯರು | : | 899 |
| ದಾನಿ ಸದಸ್ಯರು | : | 632 |
| ಮಹಾದಾನಿ ಸದಸ್ಯರು | : | 493 |
| ಪೋಷಕ ಸದಸ್ಯರು | : | 34 |
| ಮಹಾಪೋಷಕ ಸದಸ್ಯರು | : | 15 |

ಬಳಗದ ಸದಸ್ಯತ್ವ ಅಭಿವೃದ್ಧಿ ವಿಭಾಗವು 2018–2020ರ ಅವಧಿಯಲ್ಲಿ ಶ್ರೀ ಎಂ.ಕೆ. ಗುರುಮೂರ್ತಿ ಹಾಗೂ 2020–2022ರ ಅವಧಿಯಲ್ಲಿ ಶ್ರೀ ಎಂ. ಕೃಷ್ಣಪ್ರಸಾದ್ ರವರ ಸಂಚಾಲಕತ್ವದಲ್ಲಿ ಹೊಸ ಸದಸ್ಯರನ್ನು ನೇಮಕಾತಿ ಮಾಡುವ ಬಗ್ಗೆ ಸದಾ ಶ್ರಮಿಸುತ್ತಿದ್ದು, ದಿನಾಂಕ 16.10.2019 ರಿಂದ 30.09.2020 ರವರೆಗೆ 53 ಸದಸ್ಯರನ್ನು ಸೇರಿಸುವಲ್ಲಿ ಯಶಸ್ವಿಯಾಗಿದೆ ಬಳಗಕ್ಕೆ ಸೇರಿದ ಹೊಸ ಸದಸ್ಯರನ್ನು ಸ್ವಾಗತಿಸುತ್ತಾ, ಅವರ ಹೆಸರುಗಳನ್ನು ಇಲ್ಲಿ ನೀಡಲಾಗಿದೆ :

| ಕ್ರ.ಸಂ. | ಹೆಸರು | ಸದಸ್ಯತ್ವ ಸಂಖ್ಯೆ |
|---|---|---|
| 1 | ಸಂದೀಪ್ ಎಂ.ಎ | MD-0429 |
| 2 | ಸುನಿತಾ ಶರ್ಮ | MD-0430 |
| 3 | ರಕ್ಷಿತ್ ಡಿ | MD-0431 |
| 4 | ರಾಘವೇಂದ್ರ ಹತ್ವಾರ್ | MD-0432 |
| 5 | ಸುಮೇಧಾ ಆರ್. ಆಚಾರ್ಯ | MD-0433 |
| 6 | ಬಿ.ಆರ್. ರಮೇಶ್ ಆಚಾರ್ಯ | MD-0434 |
| 7 | ಶ್ರೀಶ ಮೇಲಾಂಟ | MD-0435 |
| 8 | ಹೇಮಂತ್ ರವೀಶ್ ಜಿ | MD-0437 |
| 9 | ಶ್ರೀನಿವಾಸ ಹೆಬ್ಬಾರ್ | MD-0438 |
| 10 | ರಾಜೇಂದ್ರ ಪರಂಜೆ | MD-0439 |
| 11 | ಡಾ. ಅರವಿಂದ್ | PM-041 |
| 12 | ಉಡುಪಿ ರಮೇಶ್ | MD-0440 |
| 13 | ಗಿರೀಶ್ ಪದಕಣ್ಣಾಯ | MD-0441 |
| 14 | ಡಾ. ಪ್ರವೀಣ್ ವೈ.ವಿ | DM-0442 |
| 15 | ಕಾತ್ಯಾಯಿನಿ | MD-0443 |
| 16 | ಕೆ. ವೆಂಕಟರಮಣರಾವ್ | MD-0444 |
| 17 | ಪುನೀತ್ ಉಪಾಧ್ಯಾಯ | MD-0445 |
| 18 | ಚೈತ್ರಾ ಎಂ. ಕಾವೂರು | MD-0446 |
| 19 | ಕಾರ್ತಿಕ್ ರಾವ್ | MD-0447 |
| 20 | ಪ್ರಕಾಶ್ ಆರ್. ರಾವ್ | MD-0448 |
| 21 | ಶ್ರೀನಿವಾಸ ಆಚಾರ್ಯ | MD-0449 |
| 22 | ರಾಜೇಂದ್ರ ಪುತ್ತೂರಾಯ | MD-0450 |
| 23 | ಜಯಶ್ರೀ ಪ್ರಸಾದ್ | MD-0451 |
| 24 | ನಿವೇದಿತಾ ಪ್ರಸಾದ್ | MD-0452 |
| 25 | ಶುಭಾ ಸುರೇಶ್ | MD-0453 |
| 26 | ಜ್ಯೋತಿ ಮಡಿ | MD-0454 |
| 27 | ಮೀನಾ ಮಹಾಬಲೇಶ್ವರ | MD-0455 |
| 28 | ಸುಜಾತ ರಮೇಶ್ | MD-0456 |
| 29 | ಸಾಧನಾ ಭರತ್ | MD-0457 |
| 30 | ಮೋಹಿನಿ ಬಾಲಕೃಷ್ಣ | MD-0458 |
| 31 | ಆಶಾ ಗುರುರಾಜ್ | MD-0459 |
| 32 | ಕೆ.ವಿ. ಸೌಮ್ಯ | MD-0460 |
| 33 | ಸೀಮಾ ಪಾವಂಜೆ | MD-0461 |
| 34 | ರಾಜೇಶ್ ಕೃಷ್ಣ | MD-0462 |
| 35 | ಪ್ರಕಾಶ್ ಕೃಷ್ಣಮೂರ್ತಿ | MD-0463 |
| 36 | ಸುಧೀಂದ್ರ ಕುಮಾರ್ | MD-0464 |
| 37 | ಭರತ್ ಹೆಚ್.ಜೆ. ಉಪಾಧ್ಯ | MD-0465 |
| 38 | ಕೆ. ಮುರಳೀಧರ ಆಚಾರ್ಯ | MD-0466 |
| 39 | ಸೌಮ್ಯ ಮುರಳೀಧರ | MD-0467 |
| 40 | ಗುರುಪ್ರಸಾದ್ ಮೋಹನ್‌ರಾವ್ | MD-0468 |
| 41 | ರಮೇಶ್ ಬಳ್ಳಕ್ಕುರಾಯ | MD-0469 |
| 42 | ಸುಪ್ರಿಯಾ ಗುರುಮೂರ್ತಿ | MD-0470 |
| 43 | ಸಹನಾ ಭಟ್ | MD-0471 |
| 44 | ಕೆ.ಎಸ್. ಸೀತಾಲಕ್ಷ್ಮಿ | MD-0472 |
| 45 | ಅಜಿತ್ ಕೆ. | MD-0473 |
| 46 | ಯು. ವಿಶ್ವಾಸ್ ರಾವ್ | MD-0474 |
| 47 | ನಾರಾಯಣ ಪ್ರಸನ್ನ | MD-0475 |
| 48 | ಶಶಾಂಕ್ ಕೆ | MD-0476 |
| 49 | ಶಶಿರಾಜ್ ಕೆಮ್ಮಿಂಜೆ | MD-0477 |
| 50 | ಸುಧೀಂದ್ರ ಕೆ. ಪಂತ್ರಿ | MD-0478 |
| 51 | ಕೆ.ಬಿ. ಸುಧೀಂದ್ರ ಹತ್ವಾರ್ | MD-0479 |
| 52 | ಅಶ್ವಿನ್ ಪೊಳಲಿ ರಮೇಶ್ | MD-0480 |
| 53 | ಉಷಾ ಆಚಾರ್ಯ | MD-0481 |

# ಗುರು ವಾದಿರಾಜ ರವಿಕೋಟಿ ತೇಜ

ದೈವಸಂಕಲ್ಪ ಹೇಗೋ ಯಾರು ಬಲ್ಲರು? ಇತ್ತೀಚೆಗೆ ಇಂಡಿಗೋ ವಿಮಾನ ಗಗನಗಾಮಿಯಾಗಿ ಸಂಚರಿಸುತ್ತಿದ್ದಾಗಲೇ ಗರ್ಭಿಣಿಯೊಬ್ಬರಿಗೆ ಪ್ರಸವವೇದನೆ ಕಾಣಿಸಿಕೊಂಡು ಕೆಲವೇ ಕ್ಷಣಗಳಲ್ಲಿ ಆರೋಗ್ಯವಂತ ಮಗುವೊಂದು ಹೇಮಾಪಕ್ಷಿಯಂತೆ ಬಾನದಾರಿಯಲ್ಲೇ ಲೋಕಾರ್ಪಣೆಯಾದದ್ದನ್ನು ನಾವೆಲ್ಲ ಓದಿದೆವಷ್ಟೆ? ಹಾಗೆ, ಐನೂರು ವರ್ಷಗಳ ಹಿಂದೆಯೂ ಒಂದು ಘಟನೆ ನಡೆದುಹೋಯಿತು. ಸಂತಾನಭಾಗ್ಯವಿಲ್ಲದಿರುವುದು ಬಡತನಕ್ಕಿಂತ ಮೇಲಾದ ದುಃಖವೆಂಬ ಭಾವನೆಯಿದ್ದ ಆ ಕಾಲದಲ್ಲಿ ಗಂಡಹೆಂಡಿರು ಮಠವೊಂದರ ಪೀಠಾಧಿಪತಿಗಳ ಬಳಿ ಬಂದರು. ಸಂತಾನವಿಲ್ಲ - ನೋವು ತೋಡಿಕೊಂಡರು. ಆಗುತ್ತೆ ಎಂದರು ದಿವ್ಯದೃಷ್ಟಿಯ ಯತಿ. ಆದರೊಂದು ನಿಬಂಧನೆ. ಏನದು? ಮನೆಯ ಒಳಗಾದರೆ ನಿಮ್ಮದು, ಹೊಸ್ತಿಲು ದಾಟಿ ಹೊರಗಾದರೆ ನಮ್ಮ ಮಠಕ್ಕೊಪ್ಪಿಸಬೇಕು - ಬಂತು ಆಜ್ಞೆ. ಮನೆ ಹೊರಗೆ ಪ್ರಸವವಾಗುವುದುಂಟೆ? ಎಂಬ ಹುಂಬ ಖಚಿತತೆಯಲ್ಲಿ ಗಂಡಹೆಂಡಿರ ಕಡೆಯಿಂದ ಹ್ಞೂ ಎಂಬ ಗಟ್ಟಿ ಒಪ್ಪಿಗೆ ಬಂದೇಬಿಟ್ಟಿತು. ದಿನಗಳೆದವು.



ಬಸಿರು ನಿಂತಿತು. ಸೀಮಂತ ವಾಯಿತು. ಗಂಡ ತನ್ನ ಪತ್ನಿಯ ದೇಖರೇಖಿಯನ್ನು ಅತ್ಯಂತ ಜಾಗ್ರತೆಯಿಂದ ನೋಡಿಕೊಳ್ಳುತ್ತಿದ್ದ. ಯಾವ ಕೆಲಸಕ್ಕೂ ಹೊಸಿಲು ದಾಟಬಾರದೆಂಬ ಎಚ್ಚರ ಇಬ್ಬರಲ್ಲೂ ಇತ್ತೆನ್ನೋಣ. ಅದೊಂದು ದಿನ ಪಡಸಾಲೆಗೆ ಬಂದ ಸರಸ್ವತಿಗೆ ಅಂಗಳದಾಚೆ ಹೊಲ ಶುರುವಾಗುವಲ್ಲಿ ತನ್ನ ಇಷ್ಟದ ಕೇದಾರ ಹೂವಿನ ಗಿಡಕ್ಕೆ ತುಡುಗುದನವೊಂದು ಬಾಯಿಹಾಕಿದ್ದು ಕಂಡಿತು. ಏಕಾದಶಿ ಉಪವಾಸವನ್ನು ತಾನೂ ಮಾಡಿದ್ದೇನೋ ಎಂಬಂತೆ ಹಸಿರನ್ನು ಮುಕ್ಕುತ್ತಿದ್ದ ಆ ಹಸುವನ್ನು ಓಡಿಸುವ ಹುಮ್ಮಸ್ಸಿನಲ್ಲಿ ಬುದ್ಧಿ ಕೈಕೊಟ್ಟಿತು. ದೈವವೊಂದು ಸೂತ್ರ ಬಿಗಿದು ಆಡಿಸಿದಂತೆ ಆಕೆ ಮೈ ಮರೆತು ಹೊಸಿಲು ದಾಟಿ ಹಚಾ ಹಚಾ ಎನ್ನುತ್ತ ಹೊಲದಂಚಿಗೆ ಬಿರುನಡೆದಳು. ದನವನ್ನೇನೋ ಓಡಿಸಿದ್ದಾಯಿತು. ಆದರೆ ಏದುಬ್ಬಸ ಬಂತು, ನಿಲ್ಲೋಣವೆನಿಸಿತು, ಅಡ್ಡಾದಳು, ಉಬ್ಬರದ ಸಮಯದಲ್ಲಿ ತೆರೆಗಳು ಎದ್ದೆದ್ದುಬಂದು ತೀರಕ್ಕಪ್ಪಳಿಸುವಂತೆ ಪ್ರಸವ ವೇದನೆಯ ಹೆದ್ದೆರೆ ಎದ್ದಿತು. ಕುಸಿದಳು. ಮರದ ತಂಪಾದ ನೆಳಲಿನಲ್ಲಿ ಕೆಲವೇ ಕ್ಷಣಗಳಲ್ಲಿ ಮಗು ಕಣ್ಬಿಟ್ಟಿತು. ಅಳುವಿಗೆ ಮೊದಲಿಟ್ಟಿತು. ನೋವಿನಲೆಗಳು ಮಾಯವಾಗುವ ಹೊತ್ತಿಗೆ ಆಗಿಹೋದದ್ದೇನೆಂಬುದರ ಪ್ರಜ್ಞೆ ಆ ಮಹಾತಾಯಿಗಾಯಿತು!

ವಾದಿರಾಜರು ಹುಟ್ಟಿದ್ದು ಹೀಗೆ. ವಾಗ್ದಾನಕ್ಕೆ ಕೋರ್ಟಿನ ತೀರ್ಪಿಗಿಂತ ದೊಡ್ಡ ಬೆಲೆಯಿದ್ದ ಕಾಲವಾದ್ದರಿಂದ ತಂದೆತಾಯಿ ಗುರುಗಳ ಮಾತನ್ನು ಮೀರುವ ಧೈರ್ಯ ತೋರಲಿಲ್ಲ. ಐದನೇ ವಯಸ್ಸಿಗೇ ಹುಡುಗ ಮಠದ ಸಂಪರ್ಕಕ್ಕೆ ಬಂದ. ಚೌಲ, ಉಪನಯನಗಳಾದವು. ಎಂಟನೇ ವರ್ಷಕ್ಕೆ ದೀಕ್ಷೆಯೇ ಆಗಿ ಹೋಯಿತು. ಭೂವರಾಹನಾಗಿದ್ದವನು "ಶ್ರೀ ಶ್ರೀ ವಾದಿರಾಜತೀರ್ಥರು" ಆದ. ಕುಂಭಾಸಿ ಮಠದ ಉತ್ತರಾಧಿಕಾರಿಯಾದ. ವಾಗೀಶತೀರ್ಥರೆಂಬ ದೀಕ್ಷಾಗುರುಗಳು, ಅವರ ಪೂರ್ವಾಶ್ರಮದ ತಮ್ಮನಾಗಿದ್ದ ವಿದ್ಯಾನಿಧಿತೀರ್ಥರೆಂಬ ವಿದ್ಯಾಗುರುಗಳು ಹುಡುಗನ ಯತಿಜೀವನದ ಮೊಳೆಹಾದಿಗೆ ಪಾದುಕೆಗಳಾದರು. ದೈವವೇ ನಿರ್ಣಯಿಸಿ ಸಂನ್ಯಾಸಕ್ಕೆಂದೇ ಹುಟ್ಟಿಸಿದ ಜೀವ ತಾನೆ? ಶಾಸ್ತ್ರಗ್ರಂಥಗಳ ಪಠಣ, ವ್ಯಾಕರಣ-ಅಲಂಕಾರಗಳ ಪಾಠ, ಸಂಸ್ಕೃತ ಸಾಹಿತ್ಯದ ಅಧ್ಯಯನ ನಡೆಯಿತು ಎಡೆಬಿಡದೆ - ಹಗಲು ಮಠದ ಅಟ್ಟ, ಜಗುಲಿ, ಬಯಲು, ಗುಡ್ಡಗಳಲ್ಲಿ. ಇರುಳು ಹೊಂದಿ, ನಂದಾದೀಪಗಳ ಬೆಳಕಿನಲ್ಲಿ. ತನ್ನಿಬ್ಬರು

ಗುರುಗಳಿಂದ ಪಡೆವಷ್ಟನ್ನೆಲ್ಲ ಪಡೆದು, ಮತ್ತೂ ಹಸಿವು ಹಿಂಗದೆ ಈ ಕಾವಿಧಾರಿ ಎಳೆಮಾಣಿ ಮುಂದೆ ಹೊರಟದ್ದು ತುಂಗೆ-ಭದ್ರೆಯರ ತಡಿಯಲ್ಲಿದ್ದ ಹಂಪೆಗೆ, ಗುರುವನ್ನರಸಿ. ಅಂತಿಂಥ ಗುರುವಲ್ಲ; ವಿಜಯನಗರದರಸರಿಗೇ ಗುರುವಾಗಿದ್ದ ವ್ಯಾಸರಾಜರನ್ನು ಅರಸಿ! ಒಂದು ವಜ್ರವನ್ನರಸಿ ಹೊರಟಾತನಿಗೆ ಎರಡು ವೈಡೂರ್ಯ ಸಿಕ್ಕರೆಂತೋ ಹಾಗೆ ಸಿಕ್ಕರು ಕನಕ, ಪುರಂದರರು! ಇತಿಹಾಸದ ದಾರಿಯಲ್ಲಿ ಇಂಥ ಪವಾಡಗಳು ನಡೆಯುವುದು ಕೆಲವು ದಿವ್ಯಾಶ್ವಗಳ ಬದುಕಲ್ಲಷ್ಟೇ ಇರಬೇಕು!

ಸಾಧನೆಗಳನ್ನು ಸೃಷ್ಟಿಸಲೆಂದೇ ಹುಟ್ಟಿದ್ದ ಜನ್ಮವಿರಬೇಕದು. ವಾದಿರಾಜರು ಮೊದಲು ಮಾಡಿದ್ದು ಲೋಕಸಂಚಾರ. ದೇಶದ ನಾಲ್ದೆಸೆಗಳಲ್ಲೂ ಎಡೆಬಿಡದ ಪ್ರವಾಸ, ಧರ್ಮಪ್ರಚಾರ. ಸ್ವಮತ ಮಂಡನ, ಪರಮತ ಖಂಡನ. ಆದರೆ ಎಲ್ಲೂ ದ್ವೇಷ-ವೈಷಮ್ಯಗಳಿಲ್ಲ. ಅನ್ಯರು ಕಟ್ಟಿದ್ದನ್ನು ಹೊಡೆದುರುಳಿಸಿ ತನ್ನದನ್ನು ಸ್ಥಾಪಿಸುವ ವಿಕೃತಛಲವಿಲ್ಲ. ಧರ್ಮಜಿಜ್ಞಾಸೆ, ಚರ್ಚೆ, ಸಂವಾದಗಳೇ ಹೋರಾಟದ ದಾರಿ. ಹಾಗೆಂದು ಧರ್ಮಪ್ರಸಾರದಲ್ಲಷ್ಟೇ ಕಳೆದುಹೋಗದೆ ಭಾರತದ ಉದ್ದಗಲ ಸಂದರ್ಶಿಸಿ, ಸಂದರ್ಶಿಸಿದ ಅಷ್ಟೂ ಕ್ಷೇತ್ರಗಳ ಮಾಹಿತಿಯನ್ನು ಸಂಕ್ಷಿಪ್ತವಾಗಿ ಕೊಡುವ ಟ್ರಾವಲೋಗ್ ಬರೆದರು ವಾದಿರಾಜರು! ಟಿವಿ, ಇಂಟರ್ನೆಟ್ಟುಗಳಿಲ್ಲದ ಆ ಕಾಲದಲ್ಲಿ ಜನರಿಗೆ ತೀರ್ಥಕ್ಷೇತ್ರ ಪ್ರವಾಸ ಮಾಡಲು ಅನುಕೂಲವಾಗುವಂತೆ ಭಾರತದ ಎಲ್ಲೆಲ್ಲೂ ಇದ್ದ ಪುಣ್ಯಕ್ಷೇತ್ರಗಳ, ನದಿನದಗಳ, ಬೆಟ್ಟಸಾಲುಗಳ, ಜನಜೀವನದ ರೀತಿ-ನೀತಿ-ಸಂಸ್ಕೃತಿಗಳ ಹದವಾದ ವಿವರಣೆಯಿರುವ "ತೀರ್ಥಪ್ರಬಂಧ" ಬಹುಶಃ ಭಾರತೀಯನೊಬ್ಬ ಬರೆದ ಮೊದಲ ಪ್ರವಾಸಕಥನ ಕೃತಿ ಎನ್ನಬಹುದು. ನಂತರ ಶುರುವಾಯಿತು ಕೃತಿಶ್ರೇಣಿ. ಆಚಾರ್ಯ ಮಧ್ವರ ಮೇರುಕೃತಿ ಮಹಾಭಾರತ ತಾತ್ಪರ್ಯನಿರ್ಣಯಕ್ಕೆ ಭಾವಪ್ರಕಾಶಿಕಾ ಎಂಬ ಟೀಕೆ, ನ್ಯಾಯಸುಧಾ, ತತ್ತ್ವಪ್ರಕಾಶಿಕಾ, ತಂತ್ರಸಾರಗಳಿಗೆ ಟೀಕೆ, ಯುಕ್ತಿಮಲ್ಲಿಕಾ, ನ್ಯಾಯರತ್ನಾವಲೀ, ಚಕ್ರಮೀಮಾಂಸಾ, ಉಪನ್ಯಾಸರತ್ನಮಾಲಾ, ಶ್ರುತಿತತ್ತ್ವಪ್ರಕಾಶಿಕಾ, ಹರಿಭಕ್ತಿಲತಾ, ಸದಾಚಾರಸ್ಮೃತಿ ಹೀಗೆ ಸಾಲು ಸಾಲು. ಶಾಸ್ತ್ರ ಜಿಜ್ಞಾಸೆಯಷ್ಟೇ ಅಲ್ಲದೆ ಮಾಘನಿಗೆ ಸರಿಸಮವೆನಿಸುವ ಕಾವ್ಯಕೃಷಿಯನ್ನೂ ಮಾಡಿದ್ದಾಯಿತು. ಈ ಯತಿ ವಿದ್ವಾಂಸರ ಸಂಸ್ಕೃತಕ್ಕೆ ಸೀಮಿತವಾಗಲಿಲ್ಲ, ಜನರಾಡುವ ಕನ್ನಡಕ್ಕಿಳಿದರು. ವೈಕುಂಠ ವರ್ಣನೆ, ಗುಂಡಕ್ರಿಯೆ, ಕಲ್ಕಿಸುಳಾದಿ, ಕೀಚಕವಧೆ, ಶ್ರೀಹರಿಸರ್ವೋತ್ತಮಸಾರ, ಕನ್ನಡ ಲಘುವಾಯುಸ್ತುತಿ – ಇವೆಲ್ಲ ಬಂದುದು ಅಚ್ಚ ಸ್ವಚ್ಛ ಕನ್ನಡದಲ್ಲೇ. ಭಾಮಿನೀಷಟ್ಪದಿಯಲ್ಲಿ ಸ್ವಪ್ನಗದ್ಯ ಬರೆದರು. ಕೃಷ್ಣನ ದೂತನಾಗಿ ಉದ್ಧವ ಗೋಕುಲಕ್ಕೆ ಬಂದಿಳಿದಾಗ ವಿರಹತಪ್ತ ಗೋಪಿಯರು ಒಂದು ಭ್ರಮರವನ್ನು ಮುಂದಿಟ್ಟುಕೊಂಡು ತಮ್ಮ ಮನದಾಳದ ಬೇನೆಯನ್ನು ಹೇಳಿಕೊಳ್ಳುವ ಭಾಗವತದ ಭಾವನಾತ್ಮಕ ಭ್ರಮರಗೀತವನ್ನು ರಾಗಾತೀತ ಯತಿ ವಾದಿರಾಜರು ಕನ್ನಡದ ನುಡಿಗಿಳಿಸಿದರು. ಹೀಗೆ ಸಂಸ್ಕೃತದ ಪದ್ಯಭಾಗವೊಂದನ್ನು ನೇರಾನೇರವಾಗಿ ಕನ್ನಡಕ್ಕೆ ಭಾಷಾಂತರಿಸುವ ಹೊಸ ಅನುವಾದ ಪರಂಪರೆಗೂ ಇವರು ಪ್ರಾರಂಭೋತ್ಸವ ಮಾಡಿದರು ಎನ್ನಬಹುದು.

ಮಕ್ಕಳಾಗದ ಕಾಲದಲ್ಲಿ ತಾಯಿ ಹೇಳಿಕೊಂಡಿದ್ದ ಹರಕೆ: ದೇವರಿಗೆ ಲಕ್ಷಾಭರಣ ಮಾಡಿಸುತ್ತೇನೆ ಎಂಬುದು. ದೊಡ್ಡ ಆಮಿಷ ಕೊಟ್ಟಾಗಾದರೂ ದೇವರು ಬೇಗ ಕಣ್ಣುಬಿಡಲೆಂಬ ಮುಗ್ಧಭಕ್ತಿಯುದೆನ್ನಿ. ಆದರೆ ಬಡಕುಟುಂಬದ ಆ ಹೆಣ್ಣಿಗೆ ಹರಕೆ ತೀರಿಸಲಿಕ್ಕಿದ್ದ ದಾರಿಯಾದರೂ ಯಾವುದು? ತೀರಿಸದೆ ಹೋದರೆ ಮನಸ್ಸಿನಲ್ಲಿ ಉಳಿದೇಬಿಡುವ ಕೊರೆ. ಹೇಳಲೋ ಬೇಡವೋ ಎಂಬ ಸಂದಿಗ್ಧ-ಸಂಕಟಗಳಲ್ಲೇ ಹಲವು ದಿನ ಕಳೆದವು. ಆದರೆ ಹೇಳದೆ ಇರಲಾಗಲಿಲ್ಲ. ದೊಡ್ಡವನಾಗಿದ್ದಾನೆ ಮಗ, ಕಾವಿ ಧರಿಸಿದ ಸಂನ್ಯಾಸಿಯೀಗ. ಹೆಸರುವಾಸಿಯೂ ಹೌದು. ಈಗಾದರೂ, ಈ ಮಗನ ಮೂಲಕವಾದರೂ ಹರಕೆ ತೀರಿಸುವೆನೆಂಬ ನಿರ್ಧಾರ ಹುಟ್ಟಿತು. ವಿಷಯ ಪ್ರಸ್ತಾಪಿಸಿದಳು ತಾಯಿ. ಹೊರೆಯನ್ನೇನೋ ಆ ಹೆಗಲಿಂದ ಈ ಹೆಗಲಿಗೆ ದಾಟಿಸಿದ್ದಾಯಿತು. ಆದರೆ ಧನಕನಕಗಳನ್ನು ಕೂಡಿಡದ ವಿರಕ್ತಬದುಕನ್ನು ಒಪ್ಪಿ ಅಪ್ಪಿರುವ ಸಂನ್ಯಾಸಿ ಈ ಹರಕೆಯನ್ನು ಹೇಗೆ ತೀರಿಸಿಯಾನು? ಉತ್ತರವಾಗಿ ವಾದಿರಾಜರು ಎತ್ತಿಕೊಂಡದ್ದು ಲಕ್ಷಶ್ಲೋಕಗಳ ಬೃಹತ್ ಭಾರತವನ್ನು. ಶುರುವಾಯಿತು ಲಕ್ಷ ಶ್ಲೋಕಗಳಿಗೆ ಲಕ್ಷ ಅರ್ಥ-ವ್ಯಾಖ್ಯಾನ. ಎಡೆಬಿಡದೆ ಬರೆದುಮುಗಿಸಿ ದೇವರ ಪದತಲದಲ್ಲಿಟ್ಟಾಗ "ಲಕ್ಷಾಲಂಕಾರ"ದ ಹರಕೆಯನ್ನೂ "ಅರ್ಥ"ಪೂರ್ಣವಾಗಿ ತೀರಿಸಿದಂತಾಯಿತು! ಇನ್ನೊಮ್ಮೆ ವಾದಿರಾಜರು ಹಂಪೆಗೆ ಬಂದಿಳಿದ ಹೊತ್ತಲ್ಲಿ, ರಾಮಾಯಣದ ಗೂಢಾರ್ಥಗಳನ್ನು ಒಡೆದು-ಓದಿ-ಗ್ರಹಿಸಿ ಕೊನೆಗೆ, ಅಲ್ಲಿ ವಾಲಿಭಂಡಾರವೆಂಬ

ಗುಪ್ತನಿಧಿಯೊಂದಿರಬೇಕು ಎಂಬ ನಿರ್ಣಯಕ್ಕೆ ಬಂದರು. ಅದನ್ನು ಹುಡುಕಿ ತೆಗೆಸಿದ್ದಾಯಿತು. ರಾಮಾಯಣಕಾಲದ ಧನಕನಕಗಳ ದೊಡ್ಡ ರಾಶಿಯೇ ಅವರಿಗಲ್ಲಿ ಸಿಕ್ಕಿತು. ಆ ಭಂಡಾರದ ಅಷ್ಟೂ ಐಶ್ವರ್ಯವನ್ನು ವಿಜಯನಗರದ ಆಗಿನ ಕೃಷ್ಣ–ಅಚ್ಯುತರೆಂಬ ಅರಸರಿಗೊಪ್ಪಿಸಿ ವಾದಿರಾಜರು ಎತ್ತಿಕೊಂಡದ್ದು ರಾಮ–ವಿಠ್ಠಲರ ಎರಡು ಪುಟ್ಟ ಮೂರ್ತಿಗಳನ್ನು ಮಾತ್ರ. ವಾಲಿ–ಸುಗ್ರೀವರಿಂದ ಪೂಜೆ ಮಾಡಿಸಿಕೊಂಡಿದ್ದ ಆ ಮೂರ್ತಿಗಳು ವಾದಿರಾಜರ ಮೂಲಕ ಮಠ ಸೇರಿದವು, ಕಲಿಯುಗದಲ್ಲೂ ಪೂಜೆಯ ಭಾಗ್ಯ ಪಡೆದವು. ಸರ್ವಶಕ್ತ ದೇವರ ಅಜ್ಞಾತವಾಸವನ್ನೂ ಕೊನೆಗೊಳಿಸುವ ಶಕ್ತಿಯನ್ನು ಕೆಲವೊಮ್ಮೆ ದೇವರು ಮನುಷ್ಯರಿಗೇ ದಯಪಾಲಿಸುವುದೊಂದು ಸೋಜಿಗ!

ಇನ್ನು, ಶತ್ರುಗಳಿಂದ ಸೋತುಸುಣ್ಣವಾಗಿ ತಲೆಮರೆಸಿಕೊಂಡು ತಿರುಗುತ್ತಿದ್ದ ಅರಸಪ್ಪನಾಯಕ ಸೋದೆಯ ಕಾಡಲ್ಲಿ ಎಡವಿದ್ದು ಕಲ್ಲನ್ನಲ್ಲ, ಅನರ್ಘ್ಯ ವಜ್ರವನ್ನೇ. ಏಕಾಂತ ಬಯಸಿ ಕಾಡಿನಲ್ಲಿ ಧ್ಯಾನಸ್ಥರಾಗಿದ್ದ ವಾದಿರಾಜರು ಅರಸಪ್ಪನಾಯಕನಿಗೆ ಕಾಣಿಸಿದರು. ನೆಮ್ಮದಿಯನ್ನರಸಿ ಅವರ ಪಾದಕ್ಕೆರಗಿದ ಅರಸಪ್ಪನಿಗೆ ವಾದಿರಾಜರು ಕ್ಷಾತ್ರಧರ್ಮವನ್ನು ಬೋಧಿಸಿದರು. ರಾಜಧರ್ಮದ ನೆನಪು ಮಾಡಿಕೊಟ್ಟರು. ಯುದ್ಧ ಹೂಡು ಎಂದು, ಕೃಷ್ಣ ಅರ್ಜುನನಿಗೆ ಗೀತೋಪದೇಶ ಮಾಡಿದಂತೆ, ಅರಸಪ್ಪನ ಉಡುಗಿದಭಿಮಾನಕ್ಕೆ ಅಂಕುಶದಲ್ಲಿ ತಿವಿದರು. ಅರಸಪ್ಪ ವಾದಿರಾಜರಲ್ಲಿ ಆಶೀರ್ವಾದ ಪಡೆದು ಭೀಮೋತ್ಸಾಹದಿಂದ ಸೈನ್ಯ ಕೂಡಿಸಿ ಶತ್ರುಪಾಳೆಯದ ಮೇಲೆ ಮುಗಿಬಿದ್ದು ಕೊನೆಗೂ ದಕ್ಕಿಸಿಕೊಂಡ – ಕೈಬಿಟ್ಟುಹೋಗಲಿದ್ದ ಸಂಸ್ಥಾನವನ್ನು! ಮಾಡಿದ ಉಪಕಾರಕ್ಕೆ ಕೃತಜ್ಞತೆಯೆಂಬಂತೆ ಅರಸಪ್ಪ ವಾದಿರಾಜರನ್ನು ಸೋದೆಯಲ್ಲಿರುವಂತೆ ಬೇಡಿಕೊಂಡ. ಅಲ್ಲೇ ಒಂದು ಮಠವೂ ನಿರ್ಮಾಣವಾಯಿತು. ಉಡುಪಿಯ ಅಷ್ಟಮಠಗಳ ಪೈಕಿ ಒಂದಾಗಿದ್ದ ಕುಂಭಾಸಿ ಮಠಕ್ಕೆ ಸೋದೆಯಿಂದ ದೇಣಿಗೆಯಾಗಿ ಸಿಕ್ಕಿದ ಆಸ್ತಿಯೇ ಹೆಚ್ಚಾದ್ದರಿಂದ ಅದು ಮುಂದೆ ಸೋದೆ ಮಠವೆಂದೇ ಖ್ಯಾತವಾಯಿತು. ಧರ್ಮ–ಪ್ರಭುತ್ವಗಳು ಜೊತೆ ನಿಂತು, ಅರಾಜಕತೆಯನ್ನು ಹಿಮ್ಮೆಟ್ಟಿಸಿದ ಅಪೂರ್ವ ಭಾರತೀಯ ಪ್ರಸಂಗಗಳಲ್ಲಿ ಇದೂ ಒಂದು.

ಎರಡು ಪರಿಪೂರ್ಣ ಸಂವತ್ಸರ ಚಕ್ರಗಳ ತಮ್ಮ ಜೀವಿತದಲ್ಲಿ ವಾದಿರಾಜರು ಮಾಡಿದ ಕೆಲಸಗಳ ಬಾಹುಳ್ಯ, ಗುರುತ್ವ ಎರಡೂ ದೊಡ್ಡದು. ಸೊನೆಗಾರರಿಗೆ, ಗೋವೆಯ ಕೊಂಕಣಿಗರಿಗೆ, ಕೋಟೇಶ್ವರದ ಬ್ರಾಹ್ಮಣರಿಗೆ ಶಿಷ್ಯತ್ವ, ಉಡುಪಿಯ ಪರ್ಯಾಯ ವ್ಯವಸ್ಥೆಯಲ್ಲಿ ಮಾರ್ಪಾಟು, ಮಟ್ಟುಗುಳ್ಳವೆಂಬ ದೇಸೀ ಬದನೆಯ ತಳಿ ಅಭಿವೃದ್ಧಿ, ಧರ್ಮಸ್ಥಳದಲ್ಲಿ ಮಂಜುನಾಥನ ಸ್ಥಾಪನೆ, ಪಾಳುಬಿದ್ದ ನೂರಾರು ದೇವಳಗಳ ಜೀರ್ಣೋದ್ಧಾರ, ಆಗಮೋಕ್ತರೀತ್ಯಾ ಪೂಜೆಯ ವ್ಯವಸ್ಥೆ, ಹಾಡು–ನೃತ್ಯಸಮೇತ ದೇವಪೂಜೆಯ ಪರಿಕಲ್ಪನೆ, ಸಂಸ್ಕೃತ–ಕನ್ನಡಗಳಲ್ಲಿ ಮಾತ್ರವಲ್ಲದೆ ಕರಾವಳಿಯ ಜನಭಾಷೆಯಾದ ತುಳುವಿನಲ್ಲೂ ಹಾಡುಗಬ್ಬಗಳ ರಚನೆ, ಮದುವೆಯ ಶುಭಮುಹೂರ್ತದಲ್ಲಿ ಕೇಳೇ ಕೇಳುವ ಲಕ್ಷ್ಮೀ ಶೋಭಾನೆಯ ಪದ, ತುಳಸೀಸಂಕೀರ್ತನೆಯ ಹತ್ತಾರು ಪದಗಳು.. ಅಬ್ಬಬ್ಬ, ಅದೆಷ್ಟೆಲ್ಲ! ಬಾಳಿನ ದೀರ್ಘತೆ, ಏರಿದ ಎತ್ತರ – ಎರಡರಲ್ಲೂ ಆ ಜೀವನ ದೊಡ್ಡದು.

ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿ ತಾಳು, ಕಷ್ಟ ಬಂದಾಗ ನೀ ಕಂಗೆಡದೆ ತಾಳು, ನೆಟ್ಟ ಸಸಿ ಫಲ ಬರುವ ತನಕ ಶಾಂತಿಯ ತಾಳು, ಕಟ್ಟುಬುತ್ತಿಯ ಮುಂದೆ ಉಣಲುಂಟು ತಾಳು, ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು, ಸುಳಿನುಡಿ ಕುಹಕ ಕುಮಂತ್ರವನು ತಾಳು – ವಾದಿರಾಜರು ಐನೂರು ವರ್ಷಗಳ ಹಿಂದೆಯೇ ನಮಗಾಗಿ ತೋರಿದ ದಾರಿದೀಪ ಇದು. ಅರಿತು ಅನುಸರಿಸಿದರೆ ಈ ತಾಳುವ ಕಲೆ ಬಾಳುವ ರೀತಿಯೂ ಹೌದು, ಬೆಲೆಬಾಳುವ ನೀತಿಯೂ ಹೌದು.

– **ರೋಹಿತ್ ಚಕ್ರತೀರ್ಥ** (ಕೃಪೆ: ಹೊಸ ದಿಗಂತ)

## ಭಾರ ಹೊರಿಸುವುದಲ್ಲ, ಇಳಿಸುವುದು

**ಒಬ್ಬ ಮಹಿಳೆಯು ತುಂಬಿದ ಕೊಡವನ್ನು ಎತ್ತಿ ತಲೆ ಮೇಲೆ ಇಟ್ಟುಕೊಳ್ಳಲು ಕೃಷ್ಣನನ್ನು ಕರೆದಳು. ಆದರೆ, ಕೇಳಿಯೂ ಕೇಳದಂತೆ ಹೊರಟು ಹೋದನು. ಹೇಗೋ ಮಹಿಳೆ ಅದನ್ನು ಎತ್ತಿಕೊಂಡು ಮನೆಗೆ ಹೋದಾಗ, ಆಕೆಗಿಂತ ಮುಂಚೆ ಕೃಷ್ಣ ಅಲ್ಲಿ ಹಾಜರಿದ್ದ ಮತ್ತು ಆ ಕೊಡವನ್ನು ಇಳಿಸಲು ತಾನಾಗಿಯೇ ಮುಂದೆ ಬಂದ. ಆ ಮಹಿಳೆಯು ಅವನನ್ನು ಕುರಿತು ''ಆಗ ಕರೆದರು ಬರಲಿಲ್ಲ, ಈಗ ಕರೆಯದೆಯೇ ಸಹಾಯ ಮಾಡುತ್ತಿರುವೆ, ಇದು ಅರ್ಥವಾಗಲಿಲ್ಲ'' ಎಂದಳು. ಆಗ ಕೃಷ್ಣ ಹೇಳಿದ, ''ನನ್ನ ಕೆಲಸ ಭಾರ ಹೊರಿಸುವುದಲ್ಲ, ಬದಲಿಗೆ ಭಾರ ಇಳಿಸುವುದು ''.**



*** ಇದೇ ಕೃಷ್ಣ ತತ್ವ ***

# ಸುದ್ಧಿ - ಸಂಗ್ರಹ

ಬಳಗದ ಸದಸ್ಯೆಯಾಗಿರುವ ಶ್ರೀಮತಿ ಶೋಭಾ ಉಮೇಶ್‌ರಾವ್ ರವರ ಸುಪುತ್ರಿ ಸೌ. ಮೈತ್ರಿಯವರ ವಿವಾಹ ಶ್ರೀಮತಿ ವಿದ್ಯಾ ಮತ್ತು ಶ್ರೀ. ಬಿ. ಸುರೇಶ್‌ರಾವ್ ದಂಪತಿಗಳ ಪುತ್ರ ಶ್ರೀ. ಹಯವದನ ಎಂಬ ವರನೊಡನೆ ದಿ. 2.7.2020 ರಂದು ಬೆಂಗಳೂರಿನ ಪೈ ವಿಸ್ಟ ಕನ್‌ವೆನ್‌ಷನ್ ಹಾಲ್‌ನಲ್ಲಿ ಬಂಧುಗಳ ಸಮ್ಮುಖದಲ್ಲಿ ಸರಳವಾಗಿ ನೆರವೇರಿತು. ಕೋವಿಡ್-19 ಲಾಕ್‌ಡೌನ್ ಕಾರಣ ದಿಂದಾಗಿ ಹೆಚ್ಚಿನ ಬಂಧು-ಮಿತ್ರರು ಮದುವೆಯ ಸಂಭ್ರಮದಲ್ಲಿ ಭಾಗವಹಿಸ ಲಾಗದೆ ತಮ್ಮ ಮನೆಯಲ್ಲಿ ಇದ್ದುಕೊಂಡೇ ನೂತನ ವಧು-ವರರಿಗೆ ಶುಭ ಹಾರೈಸಿದರು.

**ನಾವು ನಡೆವಾಗ ಒಂದು ಕಾಲು ಮುಂದೆ**
**ಒಂದು ಕಾಲು ಹಿಂದೆ,**
**ಆದರೆ ಮುಂದಿನದಕ್ಕೆ ಗರ್ವವಿಲ್ಲ**
**ಹಿಂದಿನದಕ್ಕೆ ಬೇಸರವಿಲ್ಲ**
**ಯಾಕೆಂದರೆ ಅದು ಕ್ಷಣಿಕ**

**ಭೃಗುವಾಣಿಯ ಸಮಸ್ತ ಓದುಗರಿಗೆ**
**ಮತ್ತು ಜಾಹೀರಾತುದಾರರಿಗೆ**



**ಕರ್ನಾಟಕ ರಾಜ್ಯೋತ್ಸವ ಹಾಗೂ**
**ದೀಪಾವಳಿಯ ಶುಭಾಶಯಗಳು**

# ಭಾವಪೂರ್ಣ ಶ್ರದ್ಧಾಂಜಲಿ



ಬಳಗದ ಸದಸ್ಯರಾದ ಶ್ರೀಮತಿ ಗೀತಾ ಶ್ರೀನಿವಾಸರವರು ದಿ.11.7.2020 ರಂದು ನಿಧನರಾಗಿರುತ್ತಾರೆ. ಅವರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲೆಂದು ಬಳಗದ ಪ್ರಾರ್ಥನೆ.


ಬಳಗದ ಸಕ್ರಿಯ ಸದಸ್ಯರಾದ ಶ್ರೀ ಪಿ.ಜಿ. ಮುರಳಿಕೃಷ್ಣರವರ ತೀರ್ಥರೂಪರಾದ ಶ್ರೀ ಪಿ. ಗೋಪಾಲಕೃಷ್ಣ ಸಾಮುಕರವರು ದಿ.14.7.2020 ರಂದು ನಿಧನ ರಾಗಿರುತ್ತಾರೆ. ದಿವಂಗತರ ಆತ್ಮಕ್ಕೆ ಸದ್ಗತಿ ಲಭಿಸಲಿ ಎಂದು ನಮ್ಮ ಪ್ರಾರ್ಥನೆ.





ಬಳಗದ ಹಿರಿಯ ಸದಸ್ಯರಾಗಿದ್ದ ಶ್ರೀ ಕೆ.ಪಿ. ಸುಬ್ರಾಯ ರವರು ದಿ.29.7.2020 ರಂದು ದೈವಾಧೀನರಾಗಿದ್ದಾರೆ. ಪತಿಯವರು ಮೃತರಾದ ಒಂದು ವಾರದಲ್ಲೆ ಅಂದರೆ ದಿ.5.8.2020 ರಂದು ಅವರ ಪತ್ನಿ ಶ್ರೀಮತಿ ಕೃಷ್ಣಕುಮಾರಿ ಯುವರೂ ನಿಧನರಾಗಿರುವುದು ಅತ್ಯಂತ ದುಃಖದ ಸಂಗತಿ. ಮೃತ ದಂಪತಿಗಳಿಗೆ ಬಳಗದ ಶ್ರದ್ಧಾಂಜಲಿ.

ಬಳಗದ ಸಕ್ರಿಯ ಸದಸ್ಯರಾಗಿದ್ದು ಬಳಗದ ಬಹುತೇಕ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದ ಶ್ರೀ ಯು.ಎ. ರಾಜರಾವ್‌ರವರು ದಿ. 23.9.2020 ರಂದು ನಿಧನರಾಗಿರು ತ್ತಾರೆ. ಮೃತರ ಆತ್ಮಕ್ಕೆ ಸದ್ಗತಿ ಲಭಿಸಲಿ ಎಂದು ಭಗವಂತನಲ್ಲಿ ನಮ್ಮ ಪ್ರಾರ್ಥನೆ.






ಬಳಗದ ಹಿತೈಷಿಗಳಾದ, ಪ್ರಸಿದ್ಧ ಜ್ಯೋತಿಷಿಗಳು ಮತ್ತು ವಿದ್ವಾಂಸರಾದ ಶ್ರೀ ವಾಗೀಶಭಟ್‌ರವರು ದಿ. 9.9.2020 ರಂದು ದೈವಾಧೀನರಾಗಿದ್ದಾರೆ. ದಿವಂಗತರಿಗೆ ಬಳಗದ ಶ್ರದ್ಧಾಂಜಲಿ.


# ದಿಗ್ಗಜರೀರ್ವರ ಕಣ್ಮರೆ

## ಭಾರತ ರತ್ನ ಪ್ರಣಬ್ ಕುಮಾರ್ ಮುಖರ್ಜಿ



ಭಾರತ ರತ್ನ ಪ್ರಣಬ್ ಕುಮಾರ್ ಮುಖರ್ಜಿಯವರು ದಿನಾಂಕ 31.8.2020 ರಂದು ನಿಧನರಾಗಿದ್ದಾರೆ. 2012–2017ರ ಅವಧಿಯಲ್ಲಿ ದೇಶದ ರಾಷ್ಟ್ರಪತಿಯಾಗಿದ್ದ ಬಹುಮುಖ ಪ್ರತಿಭೆಯ ರಾಜಕೀಯ ಮುತ್ಸದ್ಧಿ, ಪ್ರಣಬ್ ಮುಖರ್ಜಿಯವರು ರಾಜಕಾರಣದಲ್ಲಿ ಐದು ದಶಕಗಳ ಸುದೀರ್ಘ ಕಾಲ ಅನುಪಮ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಸರ್ಕಾರದಲ್ಲಿ ರಕ್ಷಣೆ, ಹಣಕಾಸು ಸೇರಿದಂತೆ ವಿವಿಧ ಪ್ರಮುಖ ಖಾತೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀಯುತರಿಗೆ 2019 ರಲ್ಲಿ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ದಿ.11.12.1935ರಲ್ಲಿ ಜನಿಸಿದ್ದ ಪ್ರಣಬ್ ಮುಖರ್ಜಿಯವರ ಅಗಲಿಕೆಯಿಂದ ದೇಶವು ಸಾರ್ವಕಾಲಿಕ ಜನಪ್ರಿಯತೆಯ ಚಾಣಾಕ್ಷ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ. ದಿವಂಗತ ಪ್ರಣಬ್ ಮುಖರ್ಜಿಯವರಿಗೆ ಆನಂದ ಬಳಗದ ಶ್ರದ್ಧಾಂಜಲಿ.

## ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ



ಚಾಮುಂಡಿ ತಾಯಿಯಾಣೆ ನಾನೆಂದು ನಿಮ್ಮವನೆ.. ಎಂದು ಹಾಡಿ ಕನ್ನಡಿಗರೊಂದಿಗೇ ಇರುವ ಪ್ರತಿಜ್ಞೆ ಮಾಡಿದ್ದ ಸ್ವರ ಸಾಮ್ರಾಟ ಶ್ರೀಪತಿ ಪಂಡಿತಾರಾಧ್ಯುಲ ಬಾಲಸುಬ್ರಹ್ಮಣ್ಯಂ ದಿ.25.9.2020 ರಂದು ನಾದಲೀನರಾಗಿದ್ದಾರೆ. ಕನ್ನಡ, ತೆಲುಗು, ತಮಿಳು ಮೊದಲಾದ ದೇಶದ ಹದಿನಾರು ಭಾಷೆಗಳಲ್ಲಿ 40 ಸಾವಿರಕ್ಕೂ ಅಧಿಕ ಹಾಡುಗಳಿಗೆ ಧ್ವನಿಯಾಗಿ ಜಗದಗಲದ ಸಂಗೀತ ರಸಿಕರ ಅಭಿಮಾನ ಮತ್ತು ಪ್ರೀತಿ ಸಂಪಾದಿಸಿದ್ದ ಬಾಲಸುಬ್ರಹ್ಮಣ್ಯಂ ನಿಧನ ಕಲಾಜಗತ್ತಿಗೆ ತುಂಬಲಾರದ ನಷ್ಟ. ತನ್ನ 55 ವರ್ಷಗಳ ಗಾಯನ ಬದುಕಿನಲ್ಲಿ ಹಿಂದಿನ ಮೇರು ನಟರಿಂದ ಇಂದಿನ ಕಿರಿಯ ನಟರವರೆಗೂ ಹಾಡಿ, ತಮ್ಮ ಕಂಠ ಸಿರಿಯ ಪ್ರೌಢಿಮೆಯನ್ನು ಮರೆದಿರುವ ಸಂಗೀತ ಸಾರ್ವಭೌಮ ಎಸ್.ಪಿ.ಬಿ. ಇನ್ನು ನೆನಪು ಮಾತ್ರ. ತನ್ನ 74ನೇ ವಯಸ್ಸಿನಲ್ಲಿ ಕಲಾ ಜಗತ್ತಿನಲ್ಲಿ ಮೌನವನ್ನು ಉಳಿಸಿ, ಕಣ್ಮರೆಯಾದ ಗಾನ ಚಕ್ರವರ್ತಿಯ ಕಂಠಸಿರಿ ನಮ್ಮ ಕಿವಿಯಲ್ಲಿ ಸದಾ ಜೀವಂತವಿರುತ್ತದೆ. ಗಾಯನ ಕ್ಷೇತ್ರದ ದಿಗ್ಗಜ ಎಸ್.ಪಿ.ಬಿ. ಯವರಿಗೆ ಬಳಗದ ಶ್ರದ್ಧಾಂಜಲಿ.

## ಭೃಗುವಾಣಿಯಲ್ಲಿ ಜಾಹೀರಾತಿಗಾಗಿ ಮನವಿ

ಭೃಗುವಾಣಿ ತ್ರೈಮಾಸಿಕ ಪತ್ರಿಕೆಯು, ಆನಂದ ಬಳಗದ ಸುಮಾರು 2000 ಸದಸ್ಯರಿಗೆ ತಲುಪುತ್ತಿದೆ. ಹಾಗೂ ಇತರ ಪ್ರಮುಖ ಸಂಘ–ಸಂಸ್ಥೆಗಳಿಗೂ ಕಳುಹಿಸಲಾಗುತ್ತಿದೆ. ಅಂದರೆ ಭೃಗುವಾಣಿಯ ಓದುಗರ ಒಟ್ಟಾರೆ ಸಂಖ್ಯೆ ಸುಮಾರು 10 ಸಾವಿರದಷ್ಟಿದ್ದು, ಈ ಪತ್ರಿಕೆ ತಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಪರಿಚಯಿಸಲು ಪ್ರಭಾವಶಾಲಿಯಾದ ಹಾಗೂ ಪರಿಣಾಮಕಾರಿಯದ ಮಾಧ್ಯಮ.

| ಜಾಹೀರಾತು ದರಗಳು (ಪ್ರತಿ ಸಂಚಿಕೆಗೆ) | | |
|---|---|---|
| 2, 3 ಮತ್ತು ಹಿಂಬದಿ ಬಹುವರ್ಣ ರಕ್ಷಾಪುಟ | : | ರೂ.3,000/– |
| ಬಹುವರ್ಣ – ಒಳಪುಟ | : | ರೂ.2,000/– |
| ಕಪ್ಪು ಬಿಳುಪು – ಒಳಪುಟ | : | ರೂ.1,500/– |
| ಅರ್ಧಪುಟ | : | ರೂ.750/– |
| ಕಾಲುಪುಟ | : | ರೂ.400/– |


ಜಾಹೀರಾತು ನೀಡಿ ಪ್ರೋತ್ಸಾಹಿಸಲು ಆಸಕ್ತಿಯುಳ್ಳವರು ಸಂಪರ್ಕಿಸಬೇಕಾದ ವಿಳಾಸ :

**ಶ್ರೀ ವೈ. ರಾಧಾಕೃಷ್ಣ**
ಮಾಜಿ ಕೋಶಾಧಿಕಾರಿ, ಆನಂದ ಬಳಗ (98440 58851)

**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**
ಕೋಶಾಧಿಕಾರಿ, ಆನಂದ ಬಳಗ (94481 34268)


For sure
relief from
CONSTIPATION
Non Habit forming
Anuloma®
DS Tablets / Churna
Anuloma DS
Anuloma
Arthnex®
Oil / Emulgel
Improved
In Arthritis &
Musculoskeletal
pain
...For safe and comprehensive
management of pain
Arthnex
Pain Relief Oil
आर्थनेक्स
Arthnex
Available at all Ayurvedic Medical Stores
BPRL
Manufactured by
Bangalore Pharmaceutical & Research Laboratory (P) Ltd.
No.163, Reservoir Street, Basavanagudi, Bengaluru - 560 004. INDIA
Consumer Care No. : 080-41208661 | Website: www.bprl.in

Bhruguvani (July-Sep. 2020) Regd. with RNI under No.KARKAN/2012/45587 No. of Pages : 36 (32+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Vijayalakshmi Bhat S., President, Ananda Balaga, Bengaluru - 01 Printed by Omkar Offset Printers, Bengaluru - 02